KANNADA

# FIRST BOOK

ಪಠನಾರ್ಥನ ಗ್ರಂಥ

## ಕನ್ನಡ ಬಾಲ ಬೋಧೆ

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು

೧ನೇ ಪುಸ್ತಕ

ಪುಸ್ತಕವನ್ನು ಈ ವಿಭಾಗದಿಂದ
ಹೊರಗೆ ಒಯ್ಯತಕ್ಕದ್ದಲ್ಲ

BANGALORE:

CENTRAL PRESS.

GOVT. CENTRAL BOOK DEPOT
37/91
985
985

# KANNADA FIRST BOOK.

# ಕನ್ನಡ ಬಾಲಬೋಧೆ.

PRINTED FOR THE DEPARTMENT OF PUBLIC INSTRUCTION, MYSORE.

NINETEENTH EDITION.—20,000.

BANGALORE:
MYSORE GOVERNMENT CENTRAL PRESS.
1890.

ಕರ್ನಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಕ್ರಮ ಸಂಖ್ಯೆ 985 ವರ್ಗ ಸಂಖ್ಯೆ 8.44
ತಾರೀಖು
ಬೆಲೆ

KARNATAKA SAHITYA PARISHAT BANGALORE

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-18

3791 985 8.44 3605 8

Digitized by ROJA MUTHIAH RESEARCH LIBRARY

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೧೮
ಕ್ರ. ಸಂಖ್ಯೆ 3791
ದಿನಾಂಕ...........................

3791
GOVT. CENTRAL BOOK DEPOT

# ಬಾಲಪಾಠಗಳು.

—:o:—

ಸ್ವರಗಳು ೧೬.

ಅ ಆ ಇ ಈ ಉ ಊ ಋ ೠ ಌ ೡ
ಎ ಏ ಐ ಒ ಓ ಔ

---

ಅರ್ಧಾಕ್ಷರಗಳು ೨.

ಂ ಃ

---

ವ್ಯಂಜನಗಳು ೩೫.

ಕ ಖ ಗ ಘ ಙ
ಚ ಛ ಜ ಝ ಞ
ಟ ಠ ಡ ಢ ಣ
ತ ಥ ದ ಧ ನ
ಪ ಫ ಬ ಭ ಮ
ಯ ರ ಲ ವ
ಶ ಷ ಸ ಹ ಳ ಕ್ಷ

ಕ್ಷ ಯೆಂಬುವದು ಸಂಯುಕ್ತಾಕ್ಷರವು.

---

| | | | | | | | | | | | |
|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೦೦ | ೧೦೦೦ |
| 1 | 2 | 3 | 4 | 5 | 6 | 7 | 8 | 9 | 10 | 100 | 1000 |

Digitized by ROJA MUTHIAH RESEARCH LIBRARY

3791



## ಸ್ವರಗಳ ಕಾಗುಣಿತ ರೂಪ.

| ಅಕ್ಷರ. | ಹೆಸರು. | ಗುರ್ತು. | ಉದಾಹರಣೆ. | |
|---|---|---|---|---|
| ಅಕಾರಕ್ಕೆ | ತಲಕಟ್ಟು | ~ | ಕ | ಗ |
| ಆ | ದೀರ್ಘ | ಾ | ಕಾ | ಗಾ |
| ಇ | ಗುಡುಸು | ಿ | ಕಿ | ಯಿ |
| ಈ | ಗುಡುಸುದೀರ್ಘ | ೀ | ಕೀ | ಯೀ |
| ಉ | ಕೊಂಬು | ು | ಕು | ಪು |
| ಊ | ಕೊಂಬುದೀರ್ಘ | ೂ | ಕೂ | ಪೂ |
| ಋ | ವಟ್ರುಸುಳಿ | ೃ | ಕೃ | ಗೃ |
| ೠ | ವಟ್ರುಸುಳಿದೀರ್ಘ | ೄ | ಕೄ | ಗೄ |
| ಎ | ಎತ್ವ | ೆ | ಕೆ | ಮೆ |
| ಏ | ಏತ್ವ | ೇ | ಕೇ | ಮೇ |
| ಐ | ಐತ್ವ | ೈ | ಕೈ | ಮೈ |
| ಒ | ಒತ್ವ | ೊ | ಕೊ | ಗೊ |
| ಓ | ಓತ್ವ | ೋ | ಕೋ | ಗೋ |
| ಔ | ಔತ್ವ | ೌ | ಕೌ | ಗೌ |
| | ಸೊನ್ನೆ | ಂ | ಕಂ | ಗಂ |
| | ವಿಸರ್ಗ | ಃ | ಕಃ | ಗಃ |



## ವ್ಯಂಜನಗಳ ಒತ್ತುರೂಪ.

| ಅಕ್ಷರ. | ಒತ್ತುರೂಪ. | ಉದಾಹರಣೆ. | |
|---|---|---|---|
| ಕ | ್ಕ | ಕ್ಕ | ಷ್ಕ |
| ಖ | ್ಖ | ಖ್ಖ | ಸ್ಖ |
| ಗ | ್ಗ | ಗ್ಗ | ದ್ಗ |
| ಘ | ್ಘ | ಘ್ಘ | ರ್ಘ |
| ಚ | ್ಚ | ಚ್ಚ | ಶ್ಚ |
| ಛ | ್ಛ | ಛ್ಛ | ರ್ಛ |
| ಜ | ್ಜ | ಜ್ಜ | ರ್ಜ |
| ಝ | ್ಝ | ಜ್ಝ | ಝ್ಝ |
| ಞ | ್ಞ | ಜ್ಞ | ಚ್ಞ |
| ಟ | ್ಟ | ಟ್ಟ | ಷ್ಟ |
| ಠ | ್ಠ | ಷ್ಠ | ತ್ಠ |
| ಡ | ್ಡ | ಡ್ಡ | ಣ್ಡ |
| ಢ | ್ಢ | ಢ್ಢ | ಕ್ಢ |
| ಣ | ್ಣ | ಣ್ಣ | ಜ್ಣ |
| ತ | ್ತ | ತ್ತ | ಕ್ತ |
| ಥ | ್ಥ | ತ್ಥ | ಸ್ಥ |
| ದ | ್ದ | ದ್ದ | ರ್ದ |

Digitized by ROJA MUTHIAH RESEARCH LIBRARY

## ವ್ಯಂಜನಗಳ ಒತ್ತುರೂಪ.

| ಅಕ್ಷರ. | ಒತ್ತುರೂಪ. | ಉದಾಹರಣೆ. | |
|---|---|---|---|
| ಧ | ್ಧ | ದ್ಧ | ಗ್ಧ |
| ನ | ್ನ | ನ್ನ | ತ್ನ |
| | ್ನ | ಸ್ನ | ಹ್ನ |
| ಪ | ್ಪ | ಪ್ಪ | ಕ್ಪ |
| ಫ | ್ಫ | ಪ್ಫ | ಷ್ಫ |
| ಬ | ್ಬ | ಬ್ಬ | ಕ್ಬ |
| ಭ | ್ಭ | ದ್ಭ | ರ್ಭ |
| ಮ | ್ಮ | ಮ್ಮ | ಸ್ಮ |
| ಯ | ್ಯ | ನ್ಯ | ಶ್ಯ |
| ರ | ್ರ | ಗ್ರ | ತ್ರ |
| | ರ್ | ರ್ತ | ರ್ಗ |
| ಲ | ್ಲ | ಲ್ಲ | ಗ್ಲ |
| ವ | ್ವ | ಸ್ವ | ಹ್ವ |
| ಶ | ್ಶ | ಶ್ಶ | ಕ್ಶ |
| ಷ | ್ಷ | ಕ್ಷ | ತ್ಷ |
| ಸ | ್ಸ | ಪ್ಸ | ತ್ಸ |
| ಹ | ್ಹ | ದ್ಹ | ನ್ಹ |
| ಳ | ್ಳ | ಳ್ಳ | ಷ್ಳ |

3791



### ೧ನೇ ಪಾಠ.

#### ಒಂದು ಅಕ್ಷರದ ಮಾತುಗಳು.

ಆ ಕಾ ನೀ ಶೀ ಕೈ ಕೋ ಸ್ತ್ರೀ
ಈ ಬಾ ಮೀ ಹೂ ಮೈ ಶ್ರೀ ಸ್ವ
ಆಕೈ ನೀಬಾ ಹೂಕೋ ಶೀಹೂ
ಈಮೈ ಕೈತಾ ಮೀಬಾ ಸ್ವಸ್ತ್ರೀ

### ೨ನೇ ಪಾಠ.

#### ಎರಡು ಅಕ್ಷರದ ಮಾತುಗಳು.

ಅವ ಮಣ ಹಸ ಸಮ ಕಲಿ
ಮಗ ಹಣ ಕರ ಲಕ್ಷ ಚಳೀ
ಕದ ಬಲ ಮಳ ಆಣೆ ಕರೀ
ದನ ಮರ ಭಯ ಸರಿ ಬರಿ
ದನಕರ ಅವಮಗ ಸರಿಕದ ಕರೀಹಸ
ಸಮಬಲ ಲಕ್ಷಮಣ ಸರಿಮಳ ಬರೀಭಯ

### ೩ನೇ ಪಾಠ.

ಅದು ಹಣೆ ತಲೆ ಕಾಲ ಗಾಯ
ಮಡು ಕರೆ ಮಳೆ ಸಾಲ ಮಾವ
ಕರೆ ಮರೆ ಹಳೆ ಮಾಳ ಯಾವ
ಕಳೆ ಬರೆ ಆಟ ಪಾಠ ಜಾಣ
ಬಲಕಡೆ ಚಳೀಕಾಲ ಯಾವಆಟ ಅದುಮರ
ಹಣಸಾಲ ಹಳೇಗಾಯ ಮಾವಜಾಣ ಪಾಠಕಲಿ

Digitized by ROJA MUTHIAH RESEARCH LIBRARY

## ೪ನೇ ಪಾಠ.

| | | | | |
|---|---|---|---|---|
| ಆಕೆ | ದಾರಿ | ಕಾಲು | ಬಾಳು | ಮಾತು |
| ಕಾಯಿ | ಸಾರಿ | ಸಾಲು | ನಾನು | ಹಾಲು |
| ಬಾಯಿ | ಆರು | ಸಾಕು | ಹಾಕು | ಜಾಣೆ |
| ಗಾಳಿ | ಆಳು | ಯಾರು | ಮಾಡ | ಯಾಕೆ |

| | | | |
|---|---|---|---|
| ಆರುಮಳ | ಆಕೆಜಾಣೆ | ಸರಿಮಾಡು | ಕಾಲುದಾರಿ |
| ಯಾರುಆಳು | ಬಾಯಿಮಾತು | ಹಣಸಾಕು | ಸಾಲುಮರ |

———

## ೫ನೇ ಪಾಠ.

| | | | | |
|---|---|---|---|---|
| ಇರ | ದಿನ | ಬಿಳಿ | ಬಿಡು | ಬೀಜ |
| ದಿಟ | ಜಡಿ | ಹಿರಿ | ಈಗ | ಈಟಿ |
| ನಿಜ | ಹಿಡಿ | ಇಡು | ಚೀಲ | ಬೀದಿ |
| ಗಿಡ | ಬಿಸಿ | ಇರು | ದೀಪ | ನೀತಿ |

| | | | |
|---|---|---|---|
| ಜಡಿಮಳೆ | ಹಿರೀಮಗ | ಕಾಯಿಯಾಕೆ | ಮಾತುಬಿಡು |
| ನಿಜಮಾತು | ಬಿಳೀಚೀಲ | ಹಾಲುಕರೆ | ಬೀಜಹಾಕು |

———

## ೬ನೇ ಪಾಠ.

| | | | | |
|---|---|---|---|---|
| ನೀರು | ನೀವು | ಉರಿ | ಹುಲಿ | ಊಟ |
| ಕೀಳು | ಉಡ | ಗುರಿ | ಹುಳಿ | ಕೂಟ |
| ಬೀಳು | ತುಸ | ಕುಡಿ | ಉಳು | ಭೂಮಿ |
| ನೀನು | ಹುಳ | ಸುಳಿ | ಗುರು | ಸೂಜಿ |

| | | | |
|---|---|---|---|
| ಬಿಸಿನೀರು | ಹುಳಿಕಾಯಿ | ಭೂಮಿಉಳು | ಗುರಿಯಿಡು |
| ತುಸಹಾಲು | ಸುಳಿಗಾಳಿ | ಕಳೆಕೀಳು | ನೀರುಕುಡಿ |

———



3791

## ೭ನೇ ಪಾಠ.

| | | | | |
|---|---|---|---|---|
| ಊರು | ಕೃಷಿ | ನೆಲ | ತೆಗೆ | ತೇವ |
| ಕೊಡು | ಕೃಪೆ | ಎಲೆ | ಬಿಳಿ | ಕೇರಿ |
| ಹೊಳು | ಎಡ | ಮೆದೆ | ಬೇಗ | ಬೇಡಿ |
| ಕೃತ್ಯ | ನೆಪ | ಕೆರೆ | ಬೇಡ | ಬೇಲಿ |

| | | | |
|---|---|---|---|
| ಈಗಕೊಡು | ತ್ಯಾವನೆಲ | ಬೇಲಿಹಾಕು | ಕೃಷಿಮಾಡು |
| ಎಡಗಾಲು | ನೆಪಬೇಡ | ಹೊಳುತೆಗೆ | ನೀನುಬಾಳು |

———

## ೮ನೇ ಪಾಠ.

| | | | | |
|---|---|---|---|---|
| ಏನು | ಹೇಳು | ಪೇಟೆ | ಬಣ್ಣ | ಹೊಡಿ |
| ಏಳು | ಶೇರು | ಬೇಟೆ | ಹೊಲ | ತೊಳಿ |
| ಮೇಲು | ಬೇಡು | ಐದು | ಬಲಿ | ಕೊಡು |
| ಕೇಳು | ಬೇರೆ | ಹೈದ | ಹೊಲಿ | ಹೊರು |

| | | | |
|---|---|---|---|
| ಯಾವಪೇಟೆ | ಬೇರೆಭೂಮಿ | ಬೇಟೆಆಡು | ದಿಟಹೇಳು |
| ಹೊಲಮಾಳ | ಬೇಗಹೇಳು | ಐದುಶೇರು | ಏನುಕೇಳು |

———

## ೯ನೇ ಪಾಠ.

| | | | | |
|---|---|---|---|---|
| ಗೊನೆ | ತೋಟ | ಓದು | ಗೋಡೆ | ಫಾಳಿ |
| ಹೊರೆ | ಮೋಡ | ನೋಡು | ಮೋರೆ | ತೌಡು |
| ಹೊಳೆ | ಓಣಿ | ತೋಳು | ಚೌಕ | ಹೌದು |
| ಓಟ | ಪೋಟಿ | ಹೋಗು | ಜೌಳಿ | ಸಾದೆ |

| | | | |
|---|---|---|---|
| ಎಲೆತೋಟ | ಫಾಳಿಗೋಡೆ | ಮೋರೆತೊಳೆ | ಓದುಕಲಿ |
| ಏಳುಹೊರೆ | ಮೇಲುಬೆಳೆ | ಗುರಿನೋಡು | ಪಾಠಮಾಡು |

———

Digitized by ROJA MUTHIAH RESEARCH LIBRARY

೧೦ನೇ ಪಾಠ.

ಅಂದ ತಂಗಿ ತಂದೆ ಗಿಂಡಿ ಹಿಂದೆ
ತಂದ ಅಂದು ಬಂದೆ ತಿಂಡಿ ನಿಂದೆ
ಬಂದ ಗಂಟು ತಿಂದ ಇಂದು ತುಂಬ
ಬಂಡಿ ಸಂತು ಬಿಂಬ ದಿಂಬು ಉಂಡ
ನೀನುಯಾರು ಜೌಳಿಪಿಂಡಿ ತಲೆದಿಂಬು ಗಂಟುತಂದ
ಹಣಸಂತು ಬಂದನಿಂದೆ ಹಿಂದೆಬಂದ ತುಂಬತಿಂದ

---

೧೧ನೇ ಪಾಠ.

ಉಂಟು ಬಂದು ಪುನಃ ಅಣ್ಣ ತಮ್ಮ
ಮುಂದೆ ಕೊಂಬೆ ಅನ್ನ ಸಣ್ಣ ಹಣ್ಣು
ದೊಂಬ ಅತಃ ತನ್ನ ಅಮ್ಮ ಮಣ್ಣು
ಮೊಂಡಿ ಇತಃ ನನ್ನ ನಮ್ಮ ಕಣ್ಣು
ಬಂದುಕೊಂಬೆ ಮುಂದೆಅನ್ನ ಸಂಣಬಣಿ ನಿಂದೆಉಂಟು
ನಮ್ಮಅಣ್ಣ ನನ್ನಹಣ್ಣು ಸಾದೆಸಾಕು ಹೌದುಕೇಳು

---

೧೨ನೇ ಪಾಠ.

ನಿನ್ನ ದೊಣ್ಣೆ ಗರ್ಭ ಸೂರ್ಯ ಅಕ್ಕ
ನಿನ್ನೆ ಮೊನ್ನೆ ಧರ್ಮ ಮೂರ್ತಿ ಅಲ್ಲ
ಎಣ್ಣೆ ಗರ್ವ ಕಾರ್ಯ ಪೂರ್ತಿ ಕಲ್ಲ
ಬೆಣ್ಣೆ ದರ್ಪ ಕೀರ್ತಿ ಕೃತ್ಯ ಕನ್ನ



ನಿನ್ನಕಣ್ಣು ಮೊಂಡಿದೊಂಬ ಸೂರ್ಯಬಿಂಬ ಗರ್ವಕೃತ್ಯ
ಬಂಡಿಮೊಣ್ಣು ದೊಂಣೆಯಾಕೆ ಧರ್ಮಕಾರ್ಯ ಕೀರ್ತಿ ಅಲ್ಲ

---

೧೩ನೇ ಪಾಠ.

ಹಗ್ಗ ಹತ್ರ ಮಗ್ಗಿ ಕಲ್ಲು ಸಕ್ರೆ
ಶಬ್ದ ಭದ್ರ ಶಕ್ತಿ ಬಟ್ಲು ಪಾತ್ರ
ಕಷ್ಟ ಅಕ್ಕಿ ಕಬ್ಬು ತಪ್ಪು ರಾತ್ರಿ
ಪಲ್ಯ ಅಲ್ಲಿ ಅಷ್ಟು ಬಟ್ಟೆ ಜಾತ್ರೆ
ಕಾಯಿಪಲ್ಯ ಅಷ್ಟುಅಕ್ಕಿ ಪೂರ್ತಿಮಾಡು ಬಟ್ಟೆ ಹೊಲಿ
ಅಲ್ಲಿಕಲ್ಲು ಕಷ್ಟಕೃಷಿ ರಾತ್ರಿಜಾತ್ರೆ ಬಟ್ಲುಭದ್ರ

---

೧೪ನೇ ಪಾಠ.

ಇಷ್ಟ ಕೆಟ್ಟ ಭ್ರಷ್ಟ ಪ್ರೀತಿ ಸ್ವಲ್ಪ
ವೀಳ್ಯ ಸ್ನೇಹ ಪ್ರಾಣ ಭ್ರಮೆ ಸ್ವತ್ವ
ಎಲ್ಲಿ ಕೊಬ್ಬು ಪ್ರಾಯ ಭ್ರಾಂತಿ ವ್ರಾತ್ಯ
ಎಷ್ಟು ದ್ರೋಹ ಖ್ಯಾತಿ ಸ್ತಬ್ಧ ಸ್ತೋತ್ರ
ಧೋತ್ರಎಲ್ಲಿ ಸ್ವಲ್ಪಸಕ್ರೆ ಪ್ರಾಣಸ್ನೇಹ ಹಿಡಿವೀಳ್ಯ
ಎಷ್ಟುಪ್ರಾಯ ಕೆಟ್ಟತಪ್ಪು ಬರೀಭ್ರಮೆ ಮಗ್ಗಿಹೇಳು

---

೧೫ನೇ ಪಾಠ.

ಎಳೇಗಿಡ ತಲಪಾಗು ಊಟಮಾಡು
ಬಳಕದ ರಾಗಿಪೈರು ಚಾಪೆಹಾಸು
ಹವಮಳೆ ಬಣಕಾಳು ಅಣಿಮಾಡು

Digitized by ROJA MUTHIAH RESEARCH LIBRARY

| | | |
|---|---|---|
| ನೆರಮನೆ | ಊರುಕೋಲು | ಮೇಲೆಕೊಡು |
| ಮರುದಿನ | ಕಾಡುಕೋಣ | ಸರಿನೋಡು |
| ಹೊರಕೋಣೆ | ಬೇಗನಡಿ | ಹೋಗಿಕೇಳು |
| ಉಡಿದಾರ | ಕದ ತೆರಿ | ಪಾಠ ಓದು |

---

### ೧೬ನೇ ಪಾಠ.

| | | |
|---|---|---|
| ಹೋದವಾರ | ಶೀಗೆ ಬೇಲಿ | ಬಿರು ಗಾಳಿ |
| ಮೂರುಜಾವ | ತೇರುಮನೆ | ಕೊಂಬುಕೂಗು |
| ನಿಶಿ ವೇಳೆ | ತೂಗುಮಂಚ | ಚಿಂತೆಯಾಕೆ |
| ಹುಸಿಮಾತು | ಸಂಜೆದೀಪ | ಕಸಿಮಾಡು |
| ಕಡೆಸಾರಿ | ಗಂಡುಕೂಸು | ನೀರುಶೇದು |
| ಹೊಣೆ ಚೀಟು | ಗೋಣಿಚೀಲ | ಬಿಗಿಹಿಡಿ |
| ಮುದಿ ಆನೆ | ರಾಜಭಾಟಿ | ಬೇಗ ಹೋಗು |

---

### ೧೭ನೇ ಪಾಠ.

| | | |
|---|---|---|
| ತಲೆಹೊರೆ | ಅಂಚೆಮನೆ | ಭಯ ಇಲ್ಲ |
| ಹಸಿ ಹುಲ್ಲು | ಸುಗ್ಗಿ ಕಾಲ | ಇದು ತಪ್ಪು |
| ದೊಡ್ಡ ತೋಪು | ನೆಲಕಡ್ಲೆ | ದೇಶ ಭಾಷೆ |
| ಹೆಣ್ಣುಮಗು | ಶುಕ್ಲಪಕ್ಷ | ಬಿಡಬೇಡ |
| ಕೆಂಪು ಬಣ್ಣ | ಕೃಷ್ಣಪಕ್ಷ | ಪಾಠ ಕೇಳು |
| ಏರು ಹೊತ್ತು | ಬೆಳ್ಳಿಬಟ್ಲು | ನೋಡಿ ಓದು |
| ಇಳಿ ಹೊತ್ತು | ಸುದ್ದಿತಂದ | ಜಯ ಉಂಟು |

---



### ೧೮ನೇ ಪಾಠ.

| | | |
|---|---|---|
| ಕಾಲು ಬಲ | ಕಾಲ ಗತಿ | ತೋಟ ಎಲ್ಲಿ |
| ಹಾದಿ ಹೋಕ | ಸುಳ್ಳು ನಾಣ್ಯ | ದಾರಿ ಹ್ಯಾಗೆ |
| ತಂಪು ಗಾಳಿ | ಹ್ಯಾಗೆ ಬಲ್ಲಿ | ಅಲ್ಲಿ ಇದೆ |
| ತಲೆ ನೋವು | ನಿಲ್ಲ ಬೇಡ | ನೀನು ಯಾರು |
| ಹೊಸ ಶೀರೆ | ಬಾಯಿ ಮುಚ್ಚು | ಬೇಗ ಓದು |
| ಅತಿ ಚೇಷ್ಟೆ | ಕದ ಮುಚ್ಚು | ಕೂತು ಬರಿ |
| ಭಾವಿ ನೀರು | ದೀಪ ಹಚ್ಚು | ಇಷ್ಟು ಸಾಕು |

---

### ೧೯ನೇ ಪಾಠ.

| | |
|---|---|
| ಅಲ್ಲಿ ಯಾರು ನೋಡು | ಅಷ್ಟು ತಿಂಡಿ ಉಂಟೋ |
| ಇದು ಏನು ಚೇಷ್ಟೆ | ಇಷ್ಟು ಮಾತು ಸಾಕು |
| ಉತ್ತು ಪೈರು ಮಾಡು | ಸದ್ದು ಮಾಡ ಬೇಡ |
| ಹುಲ್ಲು ಮೆದೆ ಹಾಕು | ಹೊತ್ತು ಗೊತ್ತು ಮಾಡು |
| ಕೆಟ್ಟ ವಸ್ತು ಬೇಡ | ನೋಡಿ ಲೆಖ್ಖ ಹೇಳು |
| ನಿನ್ನೆ ಏನು ತಂದಿ | ನಿಂತು ಪಾಠ ಓದು |
| ದಿಂಬು ಎಲ್ಲಿ ಇಟ್ಟೆ | ತಕ್ಕ ಫಲ ಪಡಿ |

---

### ೨೦ನೇ ಪಾಠ.

| | |
|---|---|
| ಅವ ಬೇಗ ಬಂದ | ಮಟ್ಟು ಮೀರ ಬೇಡ |
| ಒಳ್ಳೇ ಸುದ್ದಿ ತಂದ | ಕೆಟ್ಟ ಮಾತು ಯಾಕೆ |
| ಅದು ಏನು ಕೇಳು | ಜಿದ್ದು ಮಾಡ ಬೇಡ |



Digitized by ROJA MUTHIAH RESEARCH LIBRARY

| | |
|---|---|
| ಕಾಲ ನಂಬ ಬೇಡ | ಚಾಡಿ ಹೇಳ ಬೇಡ |
| ಯಾರ ಆಳು ನೀನು | ಹಿಂಸೆ ಮಾಡ ಬೇಡ |
| ಭಾವಿ ನೀರು ಶೇದು | ಕೂತು ಲೆಖ್ಖ ಬರಿ |
| ಇವ ಯಾರ ನೆಂಟ | ನೀನು ಮೇಲು ಪಡಿ |

———

## ೨೧ನೇ ಪಾಠ.

| | |
|---|---|
| ಒಳ್ಳೇ ಮಾತು ಕೇಳು | ಕಾಲ ರೀತಿ ನೋಡು |
| ಪಾಠ ನೋಡಿ ಓದು | ಬೇಗ ಬಂದು ಕೂಡು |
| ಕೋಪ ಮಾಡ ಬೇಡ | ಪಾಠ ಗಟ್ಟಿ ಮಾಡು |
| ಸುಳ್ಳು ಹೇಳ ಬೇಡ | ಲೆಖ್ಖ ಸರಿ ನೋಡು |
| ಸಾಲ ಮಾಡ ಬೇಡ | ಓದಿ ವಿದ್ಯೆ ಕಲಿ |
| ನೀತಿ ತಪ್ಪ ಬೇಡ | ಬುದ್ಧಿ ಶಾಲಿ ಆಗು |
| ಇಷ್ಟು ಹೊತ್ತು ಯಾಕೆ? | ತುಂಬ ಕ್ಷೇಮ ಉಂಟು |

———

## ೨೨ನೇ ಪಾಠ.

| | |
|---|---|
| ಅಂಕೆ ತಪ್ಪು ಹಾಕ ಬೇಡ | ಕೆಟ್ಟ ಕಾರ್ಯ ಮಾಡ ಬೇಡ |
| ಅಂದ ಮಾತು ತಪ್ಪ ಬೇಡ | ಮಾನ ಬಿಟ್ಟು ಕೇಳ ಬೇಡ |
| ಮೇರೆ ತಪ್ಪಿ ಹೋಗ ಬೇಡ | ದ್ರೋಹಚಿಂತೆ ಮಾಡಬೇಡ |
| ಬರೀ ಮಾತು ಆಡ ಬೇಡ | ಹೊತ್ತು ತಪ್ಪಿ ಏಳ ಬೇಡ |
| ಕೇಡು ಮಾಡ ಕೋರ ಬೇಡ | ನಿತ್ಯ ಎದ್ದು ಓದ ಬೇಕು |
| ಸುಳ್ಳು ಸುದ್ದಿ ಹೇಳ ಬೇಡ | ಪಾಠ ಗಟ್ಟಿ ಮಾಡ ಬೇಕು |

———

## ೨೩ನೇ ಪಾಠ.

ಪುಸ್ತಕವನ್ನು ಈ ವಿಭಾಗದಿಂದ
ಹೊರಗೆ ಒಯ್ಯತಕ್ಕದ್ದಲ್ಲ

| | |
|---|---|
| ಓದು ಬಿಟ್ಟು ಆಡ ಬೇಡ | ದೇಶ ಕಾಲ ನೋಡಿ ನಡಿ |
| ಕಾರ್ಯ ಬಿಟ್ಟು ಹೋಗ ಬೇಡ | ಇದು ಸರಿ ಚಿಕ್ಕ ಪ್ರಾಯ |
| ಒಳ್ಳೇ ಬುದ್ಧಿ ಕೇಳ ಬೇಕು | ಈಗ ತಾನೆ ಓದ ಬೇಕು |
| ಒಳ್ಳೇ ಕಾರ್ಯ ಮಾಡ ಬೇಕು | ನಿತ್ಯ ಓದಿ ಪಾಠ ಮಾಡು |
| ಪಾಠ ಎಲ್ಲ ಓದ ಬೇಕು | ಬೇಗ ಓದಿ ವೃದ್ಧಿ ಯಾಗು |
| ಕೂತು ಲೆಖ್ಖ ನೋಡ ಬೇಕು | ತಕ್ಕ ಸುಖ ನೀನು ಪಡಿ |

———

## ೨೪ನೇ ಪಾಠ.

### ಮೂರು ಅಕ್ಷರದ ಮಾತುಗಳು.

| | | | |
|---|---|---|---|
| ಅಂಗಳ | ಬಹಳ | ಮರಳಿ | ಮನಸು |
| ಮಂಗಳ | ಬರಹ | ಕಠಿಣ | ಸರಕು |
| ಸಂಕಟ | ಸಮಯ | ತಂಗಳು | ಜನರು |
| ಸಂಬಳ | ಚಪಲ | ಬಂಟನು | ಹಳದು |
| ಅಗಲ | ದವಸ | ಅವನು | ಕನಸು |
| ಕಪಟ | ಅಂಗಡಿ | ಅವರು | ಶರಗು |
| ಜಗಳ | ಕಂಬಳಿ | ಅವಳು | ಹಡಗು |

| | | |
|---|---|---|
| ಅಂಗಳ ಅಗಲ | ಕಂಬಳಿ ಹಳದು | ಕಠಿಣ ಜಗಳ |
| ಸಂಬಳ ಬಹಳ | ಅವನು ಬಂಟನು | ಸಂಕಟ ಸಮಯ |
| ಅಂಗಡಿ ಸರಕು | ಚಪಲ ಮನಸು | ಅವನ ಬರಹ |

———

## ೨೫ನೇ ಪಾಠ.

| | | | |
|---|---|---|---|
| ಹಸನು | ವಂಚನೆ | ಕಲಾಯು | ಯಾವದು |
| ಸನಗು | ಮದುವೆ | ಆಕಾಶ | ಯಾರದು |
| ಮಡುಗು | ಹರಿಕೇ | ಆಚಾರ | ವಾಸನೆ |

Digitized by ROJA MUTHIAH RESEARCH LIBRARY

| | | | |
|---|---|---|---|
| ಮಗನು | ಮಡಕೆ | ಕಾಗದ | ಮಾರನೆ |
| ಮಗಳು | ಅಂಬಾರ | ಮಾದರಿ | ವಾಡಿಕೆ |
| ಬಡಗು | ಬಂಗಾರ | ಆಗದು | ಕಾಣಿಕೆ |
| ಕಂಟಲೆ | ಸಹಾಯ | ಸಾಲದು | ಆಗತಿ |

| | | |
|---|---|---|
| ಮಂಗಳ ಆರತಿ | ಮಾದರಿ ಕಾಗದ | ಆಚಾರ ಸಾಲದು |
| ಯಾವದು ಕಂಟಲೆ | ಹಸನು ಸನಗು | ವಂಚನೆ ಆಗದು |
| ಕಪಟ ಕಾಳಗ | ಹುವ್ವಿನ ವಾಸನೆ | ಸಹಾಯುಯಾರದು |

---

೧೬ನೇ ಪಾಠ.

| | | | |
|---|---|---|---|
| ಆಕಳು | ಹಾಸಿಗೆ | ಇವರು | ಶಿವರು |
| ಬಾಗಲು | ಇತರ | ಇರದು | ಬಿರಕು |
| ಕಾದರು | ಕಿವಡ | ಬಿಡದು | ಜಿನಸು |
| ಬಾರದು | ದಿವಸ | ಬಿಗಿತ | ಇರಿಸು |
| ಆಕಳಿ | ಇವರ | ಹಿಡಿತ | ತಿಂಗಳು |
| ಮಾಳಿಗೆ | ಇವನು | ಕಿರದು | ತಿಂಬನು |
| ಬಾಡಿಗೆ | ಇವಳು | ಬಿಸಲು | ನಿಂತನು |

| | | |
|---|---|---|
| ಆಕಳಿ ಜಿನಸು | ಬಿರಕು ಮಡಿಕೆ | ತಂಗಳು ತಿಂಬನು |
| ಆಕಳು ಬಾರದು | ಬಂಗಾರ ಕಾಣಿಕೆ | ಸುಮ್ಮನೆ ನಿಂತನು |
| ಬಿದರು ಶಿವರು | ಇವನು ಕಿವಡ | ಬಾಡಿಗೆ ಇರದು |

---

೧೭ನೇ ಪಾಠ.

| | | | |
|---|---|---|---|
| ಈತನು | ಪುರುಷ | ಹುಡುಕು | ಭೂಷಣ |
| ನೀಚನು | ಹುಡುಗ | ಮುಸುಕು | ಕೂಡದು |



| | | | |
|---|---|---|---|
| ಜೀವನ | ಚುರುಕು | ಉಳುಕು | ಮೂಡಲು |
| ಶೀತಳ | ಗುಡುಗು | ಕುದುರೆ | ಕೆಲಸ |
| ಉಂಗುರ | ಉಸುರು | ಮುಸರೆ | ತೆರದ |
| ಸುಂದರ | ಗುರುತು | ಊಳಗ | ಶೆಳತ |

| | | |
|---|---|---|
| ಸುಲಭ ಜೀವನ | ಉಂಗುರ ಭೂಷಣ | ಈತನು ಮುದುಕ |
| ಸುಂದರ ಪುರುಷ | ಮೂಡಲುಗುರುತು | ಹುಡುಗ ಕೆಲಸ |
| ಚುರುಕುಹುಡುಗ | ಹಾಸಿಗೆ ಕಿರುದು | ದುಡುಕುಕೂಡದು |

---

೧೮ನೇ ಪಾಠ.

| | | | |
|---|---|---|---|
| ಕೆಣಕು | ನೆರಳು | ಕೇವಲ | ಚಪ್ಪರ |
| ಹೆಸರು | ಮೆಣಸು | ಕೊರಳು | ಮಕ್ಕಳು |
| ನೆನಪು | ದೇವರು | ಹೊಸದು | ಕತ್ತಲೆ |
| ಬೆಳಕು | ಸೇತುವೆ | ಹೊದರು | ಹಿತ್ತಲು |
| ಹೆದರು | ಬೇಸಿಗೆ | ಮೊಸರು | ಕೊಟ್ಟಿಗೆ |
| ಬೆರಳು | ಹೇರಳ | ಗದ್ದಲ | ಹೊದಿಕೆ |

| | | |
|---|---|---|
| ಬೆದರು ಕುದುರೆ | ಸೇತುವೆ ಹೊಸದು | ಮಕ್ಕಳ ಹೆಸರು |
| ಕೆಡಕು ಕೆಲಸ | ಹೇರಳ ಮೊಸರು | ಕೇವಲ ಕತ್ತಲೆ |
| ತಿಂಗಳ ಬೆಳಕು | ಕೊಸರು ಕೊಡಿಸು | ಮರದ ನೆರಳು |

---

೧೯ನೇ ಪಾಠ.

| | | | |
|---|---|---|---|
| ಬಕ್ಕಲು | ಮಜ್ಜಿಗೆ | ನಕ್ಷತ್ರ | ಪುಸ್ತಕ |
| ಮಕ್ಕಳು | ಅಗತ್ಯ | ಸಂಪಾದ್ಯ | ದುರ್ಗುಣ |

Digitized by ROJA MUTHIAH RESEARCH LIBRARY

| | | | |
|---|---|---|---|
| ಕನ್ನಡಿ | ರಹಸ್ಯ | ವಿಶ್ವಾಸ | ಸದ್ಗುಣ |
| ಎತ್ತರ | ಮನುಷ್ಯ | ವಿಸ್ತಾರ | ದಾಕ್ಷಿಣ್ಯ |
| ಯಾತಕ್ಕೆ | ದರಿದ್ರ | ನಿರ್ಮಾಣ | ಆಶ್ಚರ್ಯ |
| ಸುಮ್ಮನೆ | ಸಮುದ್ರ | ಪ್ರಾರ್ಥನೆ | ಸಾಮರ್ಥ್ಯ |

| | | |
|---|---|---|
| ಒಕ್ಕಲ ಮಕ್ಕಳು | ಯಾತರ ಪುಸ್ತಕ | ಕಾಲದ ಮಹಿಮೆ |
| ಚಪ್ಪರ ಎತ್ತರ | ಸುಮ್ಮನೆ ಕಲಿಸು | ದೇವರ ನಿರ್ಮಾಣ |
| ದನದ ಕೊಟ್ಟಿಗೆ | ರಹಸ್ಯ ಸಂಪಾದ್ಯ | ಆಶ್ಚರ್ಯ ಸಾಮರ್ಥ್ಯ |

---

### ೩೦ನೇ ಪಾಠ.

| | | |
|---|---|---|
| ಆಳುವ ಅರಸು | ಬರದ ಕಾಗದ | ಪುಸ್ತಕ ಓದಿರಿ |
| ಬಾಳುವ ಜನರು | ಮನೆಯ ಮಾಳಿಗೆ | ಉಪಾಧ್ಯ ಬಂದಾನು |
| ಆಡುವ ಹುಡುಗ | ಉದಯ ಆಯಿತು | ಹೆಸರು ಕೂಗ್ಯಾರು |
| ಮಾಡುವ ಕೆಲಸ | ಈಗಲೆ ಏಳಿರಿ | ಮೆಲ್ಲಗೆ ಹೇಳಿ |
| ಓದುವ ಪುಸ್ತಕ | ಮುಖವ ತೊಳೀರಿ | ಚನ್ನಾಗಿ ಓದಿರಿ |
| ತೆರದ ಬಾಗಲು | ಮಠಕ್ಕೆ ಹೋಗಿರಿ | ನಿಮಗೆ ಒಳ್ಳೇದು |

---

### ೩೧ನೇ ಪಾಠ.

| | | |
|---|---|---|
| ಚಲುವ ಕೆಲಸ | ನೀರಿನ ಶಳವು | ಬಿಡದೆ ಓದಿರಿ |
| ಹೊಳೆವ ಒಡವೆ | ಕೊಬ್ಬಿದ ಕುದುರೆ | ತಪ್ಪದೆ ಬರೀರಿ |
| ದೇವರ ಮಹಿಮೆ | ಚಿನ್ನದ ಉಂಗುರ | ವಿದ್ಯೆಯು ಕಲೀರಿ |
| ದೀಪದ ಬೆಳಕು | ಸುಂಕದ ಚಾವಡಿ | ಲೆಖ್ಖವ ಮಾಡಿರಿ |
| ಸೂರ್ಯನ ಕಿರಣ | ಅಸಡ್ಡೆ ಆಗದು | ಜಾಣರು ಆಗಿರಿ |
| ಗಾಳಿಯು ಬಿರಸು | ಬುದ್ಧಿಯು ಕೇಳಿರಿ | ಸಂಪತ್ತು ಪಡೀರಿ |

---



### ೩೨ನೇ ಪಾಠ.

| | |
|---|---|
| ಹೊಳೆಯು ನೀರಿನ ಶಳವು | ನಷ್ಟದ ಬದಕು ಯಾತಕ್ಕೆ? |
| ಕಳದ ವಾರದ ಸುದ್ದಿಯು | ಕಷ್ಟದ ಕಾಲವು ತೀರಿತು |
| ತಿಳಿದು ಮಾಡಿದ ಕೆಲಸ | ತಿಂಗಳ ಸಂಬಳ ಕೊಡಿಸು |
| ಕರದು ಕೇಳಿದ ವಿಷಯ | ತಪ್ಪದೆ ಪಾಠವ ಒಪ್ಪಿಸು |
| ನಡದ ಕಾರ್ಯದ ವಿವರ | ಚನ್ನಾಗಿವಿದ್ಯೆಯುಕಲ್ತುಕೊ |
| ದುಷ್ಟರ ಸ್ನೇಹವು ಆಗದು | ಉಚಿತ ಜ್ಞಾನವ ಪಡಕೊ |
| ಎಷ್ಟರ ಸಾಲವೂ ಕೂಡದು | ಕೂಡಲೇಸೌಖ್ಯವುಬಂದೀತು |

---

### ೩೩ನೇ ಪಾಠ.

| | |
|---|---|
| ಕಲಿತ ಬುದ್ಧಿಯ ಚುರುಕು | ತೆಗದ ಸಾಲವ ತೀರಿಸು |
| ನುಡಿದ ಮಾತಿನ ನಿಜವು | ಎರಡು ಬಗೆಯು ಬಾರದು |
| ಚಲುವದ್ರಾಕ್ಷಿಯಗೊಂಚಲು | ಕೆಡಕುಚೇಷ್ಟೆಯತ್ಯಜಿಸು |
| ಸುಗ್ಗಿಯ ಕಾಲದ ದವಸ | ಶಿಷ್ಟರ ಸಂಗವ ಬೆಳಸು |
| ಪಡದ ಮೇಲನ್ನು ನೆನಸು | ನೆಟ್ಟಗೆ ಬುದ್ಧಿಯ ಕಲ್ತುಕೊ |
| ನುಡಿದ ಮಾತನ್ನು ನಡಿಸು | ಬಿಡದೆ ಪಾಠವ ಓದಿಕೊ |
| ಬಿಡದೆ ದೇವರ ಭಜಿಸು | ನಿನಗೆ ತಪ್ಪದೆ ಮೇಲುಂಟು |

---

### ೩೪ನೇ ಪಾಠ.

ಆದಾಯ ತಿಳಿದು ವೆಚ್ಚವ ಮಾಡಿಕೊ. ನಾಣ್ಯದ ನೋಟವು ಶಟ್ಟಿಗೆ ತಿಳೀದೆ? ಕಾಲದ ರೀತಿಯ ತಿಳಿದು

Digitized by ROJA MUTHIAH RESEARCH LIBRARY

ಮಾತಾಡು. ಎಂಜಲು ಅನ್ನವ ಉಣ್ಣಲೇ ಬಾರದು. ಇಬ್ಬಂದಿ ಕೆಲಸ ಮಾಡಲೇ ಕೂಡದು. ಕಪಟ ಜನರ ಸ್ನೇಹವು ಆಗದು. ಹೆಮ್ಮೆಯ ಹೇಳದೆ ಇರೋಣ ಒಳ್ಳೇದು. ಹಸಿದು ಉಂಡರೆ ರುಚಿಯು ಬಹಳ. ಮೂರ್ಖಗೆ ಹೇಳಿದ ಬುದ್ಧಿಯು ವ್ಯರ್ಥವು. ಮಾನೆಯ ಸಮಕ್ಕೆ ಅಕ್ಷರ ಇರಲಿ. ಕೈಯಲ್ಲಿ ಪುಸ್ತಕ ತಪ್ಪದೆ ಇರಿಸು. ಹೋದರೆ ಬಾರದು ಬಾಲ್ಯದ ವಯಸ್ಸು. ಸಮಯ ಬಿಡದೆ ವಿದ್ಯೆಯ ಕಲ್ತುಕೊ. ಸಿರಿಯು ಬೇಗದಿ ತಪ್ಪದೆ ಬರುತದೆ.

---

## ೩೫ನೇ ಪಾಠ.

### ನಾಲ್ಕು ಅಕ್ಷರದ ಮಾತುಗಳು.

| | | |
|---|---|---|
| ಅರಸನು | ಕಿರುಕೋಳ | ಅನುಕೂಲ |
| ಕುಡಗೋಲು | ಅಭಿಮಾನ | ಪರದೇಶಿ |
| ಆಲೋಚನೆ | ಪರಾಕ್ರಮ | ಆವಶ್ಯಕ |
| ಚಾಡಿಗಾರ | ಆಕ್ಷೇಪಣೆ | ಜೀವಜಂತು |
| ಉಪಕಾರ | ದೀಪಸ್ತಂಭ | ಉಪಚಾರ |
| ದೇವಸ್ಥಾನ | ಕಳವಳ | ನಮಸ್ಕಾರ |
| ಕಳ್ಳತನ | ನ್ಯಾಯವಾಗಿ | ನೇಮವಾಗಿ |

ಅರಸನು ಪ್ರಜೆಗಳ ಪಾಲಕನು. ಅನ್ಯಾಯವು ಸಂಕಟವ ತರುವದು. ಆಡುವದು ಶುದ್ಧವಾಗಿ ಒಳ್ಳೇದಲ್ಲ. ಆಲೋಚನೆ ಯಾವಾಗಲೂ ಅನುಕೂಲ. ಆಲಸ್ಯವ ಮಾಡುವದು ಹಾನಿಕರ. ಎಲ್ಲರಿಗೂ ಸಮಾಧಾನ ಆವಶ್ಯಕ.

---

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೧೮
ಕ್ರ. ಸಂಖ್ಯೆ 3791 ವಿ. ಸಂಖ್ಯೆ ......
ಶೀರ್ಷಿಕೆ ......

| | | |
|---|---|---|
| ಪಶ್ಚಾತ್ತಾಪ | ಶುದ್ಧವಾಗಿ | ಪ್ರಯೋಜನ |
| ಸಮಾಚಾರ | ಭಾಗ್ಯವಂತ | ಸಮಾಧಾನ |
| ಮೇಳಗಾರ | ಸಹವಾಸ | ಮೊಣಕಾಲು |
| ಸರಿಯಾಗಿ | ವರ್ತಮಾನ | ಸಮವಾಗಿ |
| ವಿಚಾರಣೆ | ಸಿಂಹಾಸನ | ವಿಜ್ಞಾಪನೆ |
| ಸಿದ್ಧವಾಗಿ | ವ್ಯರ್ಥವಾಗಿ | ಹುಚ್ಚುತನ |
| ಶೀಘ್ರವಾಗಿ | ಕ್ಷೇಮವಾಗಿ | ಉಪಕಾರ |

ಕೊಟ್ಟಮಾತು ತಪ್ಪುವದು ಅನುಚಿತ. ವ್ಯರ್ಥವಾದ ಕೆಲಸಕ್ಕೆ ಹೋಗಬೇಡ. ಪ್ರತಿ ದಿನ ಬರಿಯದೆ ಇರಬೇಡ. ಮಾತಿನಲ್ಲಿ ಕಾಲವನ್ನು ಕಳಯಬೇಡ. ವಿದ್ಯೆಯಲ್ಲಿ ಆಸಕ್ತಿಯ ಇಡಬೇಕು. ಬುದ್ಧಿಯನ್ನು ಕಲ್ತುಕೊಂಡು ಬಾಳಬೇಕು.

---

## ೩೬ನೇ ಪಾಠ.

### ತಿಂಗಳುಗಳು ೧೨.

| | |
|---|---|
| ಚೈತ್ರ | ಆಶ್ವೀಜ |
| ವೈಶಾಖ | ಕಾರ್ತಿಕ |
| ಜ್ಯೇಷ್ಠ | ಮಾರ್ಗಶಿರ |
| ಆಷಾಢ | ಪುಷ್ಯ |
| ಶ್ರಾವಣ | ಮಾಘ |
| ಭಾದ್ರಪದ | ಫಾಲ್ಗುಣ |

Digitized by ROJA MUTHIAH RESEARCH LIBRARY

## ಸಂವತ್ಸರಗಳು ೬೦.

| | | |
|---|---|---|
| ಪ್ರಭವ | ಸರ್ವಜಿತು | ಪ್ಲವಂಗ |
| ವಿಭವ | ಸರ್ವಧಾರಿ | ಕೀಲಕ |
| ಶುಕ್ಲ | ವಿರೋಧಿ | ಸೌಮ್ಯ |
| ಪ್ರಮೋದೂತ | ವಿಕೃತಿ | ಸಾಧಾರಣ |
| ಪ್ರಜೋತ್ಪತ್ತಿ | ಖರ | ವಿರೋಧಿಕೃತು |
| ಅಂಗೀರಸ | ನಂದನ | ಪರೀಧಾವಿ |
| ಶ್ರೀಮುಖ | ವಿಜಯ | ಪ್ರಮಾದೀಚ |
| ಭಾವ | ಜಯ | ಆನಂದ |
| ಯುವ | ಮನ್ಮಥ | ರಾಕ್ಷಸ |
| ಧಾತು | ದುರ್ಮುಖಿ | ನಳ |
| ಈಶ್ವರ | ಹೇವಿಳಂಬಿ | ಪಿಂಗಳ |
| ಬಹುಧಾನ್ಯ | ವಿಳಂಬಿ | ಕಾಳಯುಕ್ತಿ |
| ಪ್ರಮಾದಿ | ವಿಕಾರಿ | ಸಿದ್ಧಾರ್ಥಿ |
| ವಿಕ್ರಮ | ಶಾರ್ವರಿ | ರೌದ್ರಿ |
| ವಿಷು | ಪ್ಲವ | ದುರ್ಮತಿ |
| ಚಿತ್ರಭಾನು | ಶುಭಕೃತು | ದುಂದುಭಿ |
| ಸ್ವಭಾನು | ಶೋಭಕೃತು | ರುಧಿರೋದ್ಗಾರಿ |
| ತಾರಣ | ಕ್ರೋಧಿ | ರಕ್ತಾಕ್ಷಿ |
| ಪಾರ್ಥಿವ | ವಿಶ್ವಾವಸು | ಕ್ರೋಧನ |
| ವ್ಯಯ | ಪರಾಭವ | ಅಕ್ಷಯ |

---



## ೩೮ನೇ ಪಾಠ.

ಅಭಿವೃದ್ಧಿ ಆಗತಕ್ಕ ಕಾರ್ಯದಲ್ಲಿ ಪ್ರವೇಶಿಸು. ಉಂಟಾದ್ದು ಉಂಟಾದ ಹಾಗೆ ಹೇಳಬೇಕು. ಐಶ್ವರ್ಯ ಸ್ಥಿರವೆಂದು ನಂಬಿಕೊಂಡು ಇರಬೇಡ. ಜೋಡಿಲ್ಲದ ಜನರಲ್ಲಿ ಜಗಳವ ಮಾಡಬೇಡ. ರೋಗವನ್ನು ಅನ್ಯರಿಗೆ ತಿಳಿಸದೆ ಇರಬೇಡ. ಚನ್ನಾಗಿ ಓದಿದರಲ್ಲದೆ ಪಾಠವು ಬಾರದು. ಜ್ಞಾಪಕ ತಪ್ಪಿದರೆ ಕೆಲಸ ಕೆಡುತ್ತದೆ. ಗಿಡವಿಟ್ಟು ನೀರು ಹಾಕಿ ಬೆಳಸಿದವ ಒಬ್ಬನು. ಅದರ ಫಲವನ್ನು ಪಡೆದವನು ಮತ್ತೊಬ್ಬನು. ಮರದ ಗುಣವು ಫಲದಿಂದ ತಿಳಿಯುತ್ತದೆ. ಯಾರಮೇಲೂ ಇಲ್ಲದ್ದನ್ನು ಹೇಳಬಾರದು. ಬಾಯಿ ಒಳ್ಳೇದಾದರೆ ಊರು ಒಳ್ಳೇದು.

---

## ೩೯ನೇ ಪಾಠ.

### ಮನುಷ್ಯ ಶರೀರ ಅವಯವಗಳು.

ಅವನು ನಾಚಿಕೆಯಿಂದ ತಲೆ ಬಗ್ಗಿದನು. ಅವನ ಮುಖವು ಚಂದ್ರನ ಹಾಗೆ ಪ್ರಕಾಶವಾಗಿ ಇದೆ. ಮೈ ಚನ್ನಾಗಿಲ್ಲವವರನ್ನು ವೈದ್ಯರು ಕಣ್ಣಿನಲ್ಲಿ ನೋಡಿ ಔಷಧ ಕೊಡುತ್ತಾರೆ. ಜನರು ಮೂಗಿನಲ್ಲಿ ವಾಸನೆ ನೋಡುತ್ತಾರೆ. ಕಿವಿಯಲ್ಲಿ ಶಬ್ದವನ್ನು ಕೇಳುತ್ತಾರೆ. ಬಾಯಿಯಲ್ಲಿ ಮಾತಾಡುತ್ತಾರೆ. ಕೈಗಳಲ್ಲಿ ಕೆಲಸ ಮಾಡುತ್ತಾರೆ. ಕಾಲಲ್ಲಿ ನಡೆಯುತ್ತಾರೆ. ಹಲ್ಲುಗಳಲ್ಲಿ ಅಗಿಯುತ್ತಾರೆ. ನಾಲಿಗೆಯಲ್ಲಿ ರುಚಿ ನೋಡುತ್ತಾರೆ. ಬೆರಳಿನಿಂದ ಬರಿಯ ಬಹುದು.

Digitized by ROJA MUTHIAH RESEARCH LIBRARY

ಕಾಲು ಬೆರಳಿಗಿಂತ ಕೈ ಬೆಟ್ಟು ಉದ್ದ. ಓಡಿ ಬಳಲಿದರೆ ಎದೆ ಬಡಿದು ಕೊಳ್ಳುತ್ತದೆ. ಭಾರವನ್ನು ಹೊತ್ತರೆ ಬೆನ್ನು ಕಾಯಿ ಕಟ್ಟುತ್ತದೆ. ನೆಗಡಿಯಾದರೆ ಮೂಗು ಕಟ್ಟಿಕೊಳ್ಳುತ್ತದೆ. ಕಣ್ಣುಗಳು ಎರಡು, ಒಂದು ಬಲ ಕಣ್ಣು, ಒಂದು ಎಡ ಕಣ್ಣು. ಕಿವಿಗಳು ಎರಡು, ಒಂದು ಬಲಕಿವಿ, ಒಂದು ಎಡಕಿವಿ. ಕೈಗಳು ಎರಡು, ಒಂದು ಬಲಕೈ, ಒಂದು ಎಡಕೈ. ಕಾಲುಗಳು ಎರಡು, ಒಂದು ಬಲಕಾಲು, ಒಂದು ಎಡಕಾಲು.

---

### ೪೦ನೇ ಪಾಠ.

### ಮೃಗಾದಿಗಳ ಧ್ವನಿ.

ನಾಯಿ ಬೊಗಳುತ್ತದೆ. ಹಂದಿ ಗರ್ಗರಿಸುತ್ತದೆ. ಕುದುರೆ ಕೆನೆಯುತ್ತದೆ. ಕತ್ತೆ ಅರಚುತ್ತದೆ. ಎತ್ತು ಗುಟರ್ರೈಸುತ್ತದೆ. ಕುರಿ ಅರಚುತ್ತದೆ. ಸಿಹ್ಮ ಘರ್ಜಿಸುತ್ತದೆ. ಆನೆ ಕಿರುಚುತ್ತದೆ. ಹುಲಿ ಆರ್ಭಟಿಸುತ್ತದೆ. ಬೆಕ್ಕು ಮೊಯಿಗರಿಯುತ್ತದೆ. ಕಾಗಿ ಕೋಳಿ ಕಪ್ಪೆ ಇವು ಕೂಗುತ್ತವೆ. ಹಾರುವಾಣ ಗುಬ್ಬಳಿಸುತ್ತದೆ. ಹಾವು ಬುಸುಗುಟ್ಟುತ್ತದೆ. ದುಂಬಿ ಜೇನುಹುಳ ಇವು ಮೊರೆಯುತ್ತವೆ ಮನುಷ್ಯರು ನಾನಾವಿಧವಾದ ಮಾತುಗಳನ್ನು ಆಡುತ್ತಾರೆ.

---

### ೪೧ನೇ ಪಾಠ.

### ಮೃಗಾದಿಗಳ ಚೇಷ್ಟೆಗಳು.

ಹಸ ಎತ್ತು ಎಮ್ಮೆ ಕೋಣ ಇವು ಹಾಯುತ್ತವೆ. ಕುದುರೆ ಒದೆಯುತ್ತದೆ. ಸಿಹ್ಮ ಹುಲಿ ಇವು ಹೊಂಚು



ಹಾಕಿ ಮೃಗಗಳ ಮೇಲೆ ನೆಗೆಯುತ್ತವೆ. ಟಗರು ಕಾಳಗ ಕಾದುತ್ತದೆ. ನಾಯಿ ಕಚ್ಚುತ್ತದೆ. ಹಂದಿ ಹೊರಳಾಡುತ್ತದೆ. ಕೋತಿಗಳು ಹಾವಳಿ ಮಾಡುತ್ತವೆ. ಬೆಕ್ಕು ಇಲಿಗಳ ಹಿಡಿಯುತ್ತವೆ. ನವಿಲು ಆಡುತ್ತದೆ. ಕೋಳಿಗಳು ಜಗಳವಾಡುತ್ತವೆ. ಹೆಗ್ಗಣ ಹೋದು ಮಾಡುತ್ತದೆ. ಇಲಿ ಬಿಲಾ ಕೊರಿಯುತ್ತದೆ. ಚೇಳು ಕುಟುಕುತ್ತದೆ.

---

### ೪೨ನೇ ಪಾಠ.

ಬಿಸಲು ಕಾಯುತ್ತದೆ. ಗಾಳಿ ಬೀಸುತ್ತದೆ. ಬೆಂಕಿ ಸುಡುತ್ತದೆ. ದೀಪ ಉರಿಯುತ್ತದೆ. ಮೋಡ ಕವಿಯುತ್ತದೆ. ಮಿಂಚುತ್ತದೆ, ಗುಡುಗುತ್ತದೆ, ಮಳೆ ಹುಯ್ಯುತ್ತದೆ. ನೀರು ಹರಿಯುತ್ತದೆ. ಬೀಜ ಒಡದು ಮೊಳತು ಚಿಗತು ಸೊಸಿಯಾಗುತ್ತದೆ. ಸೊಸಿ ಬೆಳದು ಗಿಡವಾಗಿ ಮರವಾಗುತ್ತದೆ. ಮೊಗ್ಗು ಅರಳಿ ಹೂವಾಗುತ್ತದೆ. ಹೀಚು ಕಾಯಾಗಿ ಬಲತು ಮಾಗಿ ಹಣ್ಣಾಗುತ್ತದೆ. ಎಲೆ ಉದುರುತ್ತದೆ. ತೇವ ಒಣಗುತ್ತದೆ. ಬೆಳಕು ಕತ್ತಲೆಯನ್ನು ಹೋಗಲಾಡಿಸುತ್ತದೆ.

---

### ೪೩ನೇ ಪಾಠ.

ಚಿನ್ನ ಬೆಳ್ಳಿ ಮುತ್ತು ಇವು ಹೊಳೆಯುತ್ತವೆ. ರತ್ನಗಳು ಥಳಥಳಿಸುತ್ತವೆ. ನಕ್ಷತ್ರಗಳು ಮಿಣುಕುತ್ತವೆ. ಹೊತ್ತು ಹೋಗುತ್ತದೆ. ಬಡಗಿ ಮರಕೆಲಸ ಮಾಡುತ್ತಾನೆ.



Digitized by ROJA MUTHIAH RESEARCH LIBRARY

ಗರಗಸಗಾರ ಮರವನ್ನು ಕೊಯ್ಯುತ್ತಾನೆ. ಕಮ್ಮಾರ ಕಬ್ಬಿಣ ಕೆಲಸ ಮಾಡುತ್ತಾನೆ. ಕಂಚುಗಾರನು ಕಂಚು ತಾಂಬ್ರ ಹಿತ್ತಾಳೆ ಪಾತ್ರೆಗಳನ್ನು ಮಾಡುತ್ತಾನೆ. ಅಕ್ಕಸಾಲೆ ಚಿನ್ನ ಬೆಳ್ಳಿ ಒಡವೆಗಳನ್ನು ಮಾಡುತ್ತಾನೆ. ಜಾಡರು ಧೋತ್ರ ಶೀರೆ ಮುಂತಾದ ಬಟ್ಟೆಗಳನ್ನು ನೇಯುತ್ತಾರೆ. ಕಲ್ಲು ಕುಟಿಗ ಕಲ್ಲು ಕೆಲಸವನ್ನು ಮಾಡುತ್ತಾನೆ. ಒಡ್ಡನು ಭಾವಿ ತೋಡುತ್ತಾನೆ, ಮಣ್ಣು ಕೆಲಸ ಮಾಡುತ್ತಾನೆ. ಗಾಣಿಗನು ಎಣ್ಣೇಮಾಡಿ ಮಾರುತ್ತಾನೆ. ಕವಾಡಿಗನು ಹಾಲು ಮೊಸರು ಬೆಣ್ಣೇ ಇವುಗಳನ್ನು ಮಾರುತ್ತಾನೆ. ವರ್ತಕರು ನಾನಾ ಜಿನಸುಗಳನ್ನು ಕೊಂಡು ಲಾಭಕ್ಕೆ ಮಾರುತ್ತಾರೆ.

---

## ೪೪ನೇ ಪಾಠ.

## ಓದುವ ಕ್ರಮ.

ಪಾಠವನ್ನು ತಿಳಿಯುವಹಾಗೆ ಸ್ಪಷ್ಟವಾಗಿ ಓದಬೇಕು. ಬಹಳ ಘಟ್ಟಿಯಾಗಿ ಓದಬಾರದು. ಬಹಳ ಮೆಲ್ಲಗೂ ಓದಬಾರದು, ಅವಸರವಾಗಿಯೂ ಓದಬಾರದು, ಹಾಡುವ ಹಾಗೆ ದೀರ್ಘಸ್ವರದಿಂದಲೂ ಓದಬಾಗದು, ಮಾತಾಡುವ ರೀತೀಲಿ ತರಗತಿಯಲ್ಲಿ ಇರುವವರಿಗೆಲ್ಲಾ ಕೇಳಿಸುವ ಹಾಗೆ ಚನ್ನಾಗಿ ಓದಬೇಕು. ಓದಿದ್ದನ್ನ ಸರಿಯಾಗಿ ತಿಳಿದುಕೊಂಡು ಮುಂದಟ್ಟು ಮಾಡಿಕೋಬೇಕು. ಬಹಳ ಓದಿ ಸ್ವಲ್ಪ ತಿಳಿದುಕೊಳ್ಳುವದಕ್ಕಿಂತ ಸ್ವಲ್ಪ ಓದಿ ಬಹಳ ತಿಳಿದು



ಕೊಳ್ಳುವದು ಒಳ್ಳೇದು. ಒಂದೊಂದು ಹೊತ್ತಿನಲ್ಲಿ ಒಂದೊಂದು ಪಾಠ ಓದಿ ಗಟ್ಟಿಮಾಡಬೇಕು. ಪರಾಕಾಗಿ ಇರದೆ ಶ್ರದ್ಧೆಯಾಗಿ ಇದ್ದುಕೊಂಡು ಕಲಿಯಬೇಕು. ಓದು ಬರಹ ಕಲಿಸುವಂಥಾವರ ವಿಷಯದಲ್ಲಿ ಕೃತಜ್ಞತೆ ಇಡಬೇಕು.

---

## ೪೫ನೇ ಪಾಠ.

## ತಾಯಿ ತಂದೆಗಳ ವಿಷಯದಲ್ಲಿ ಮಕ್ಕಳು ನಡಕೊಳ್ಳಬೇಕಾದ ಕ್ರಮ.

ತಾಯಿ ತಂದೆಗಳಮೇಲೆ ಮಕ್ಕಳು ಬಹಳ ಪ್ರೀತಿಯಾಗಿ ಇರಬೇಕು. ಮಕ್ಕಳು ಯಾವಾಗಲೂ ತಾಯಿ ತಂದೆಗಳಿಗೆ ಹಿತವನ್ನ ಮಾಡುತ್ತಾ ಅವರನ್ನ ಸಂತೋಷ ಪಡಿಸಬೇಕು. ಮಕ್ಕಳು ಚಿಕ್ಕವರಾಗಿ ಏನೂ ತಿಳಿಯದೆ ಕೈಲಾಗದವರಾಗಿದ್ದಾಗ ತಾಯಿ ತಂದೆಗಳು ಬಹಳ ಪ್ರೀತಿಯಿಂದ ಅವರಿಗೆ ಅನ್ನ ವಸ್ತ್ರಗಳನ್ನ ಕೊಟ್ಟು ಅವರನ್ನು ತುಂಬಾ ಆದರಿಸಿ ಚನ್ನಾಗಿ ಕಾಪಾಡಿ ಇರುತ್ತಾರೆ. ಆದ್ದರಿಂದ ಮಕ್ಕಳು ತಾಯಿತಂದೆಗಳ ಮಾತು ಕೇಳುತ್ತಾ ಅವರಲ್ಲಿ ಬಹಳ ಕೃತಜ್ಞತೆಯುಳ್ಳವರಾಗಿ ಇರಬೇಕು. ಇದೂ ಅಲ್ಲದೆ ಮಕ್ಕಳು ತಮ್ಮ ಕೈಲಾದಷ್ಟು ಸಹಾಯವನ್ನ ತಾಯಿ ತಂದೆಗಳಿಗೆ ಮಾಡುತ್ತಾ ಅವರಲ್ಲಿ ವಿಶ್ವಾಸ ಉಳ್ಳವರಾಗಿ ಇರಬೇಕು.

---

Digitized by ROJA MUTHIAH RESEARCH LIBRARY

## ೪೬ನೇ ಪಾಠ.

### ಮನೆ.

ಮನೆ ಮನುಷ್ಯರು ಬಿಕ್ಕಲಿರುವದಕ್ಕೆ ಕಟ್ಟಿದಂಥಾ ಕಟ್ಟಣ. ಉಪ್ಪರಿಗೆ ಮನೆ, ಮಾಳಿಗೆ ಮನೆ, ಹೆಂಚಿನ ಮನೆ, ಹುಲ್ಲಿನ ಮನೆ ಎಂದು ನಾನಾವಿಧವಾದ ಮನೆಗಳುಉಂಟು. ಹಣಗಾರರು ಉಪ್ಪರಿಗೆ ಮನೆಯಲ್ಲಿ ವಾಸಮಾಡುತ್ತಾರೆ. ಸ್ಥಿತಿಯಲ್ಲಿ ಅವರಿಗಿಂತ ಕಮ್ಮಿಯಾದವರು ಮಾಳಿಗೆಮನೆ, ಹೆಂಚಿನಮನೆ ಇವುಗಳಲ್ಲಿ ವಾಸಮಾಡುತ್ತಾರೆ. ಬಡವರಾದವರು ಹುಲ್ಲಿನ ಮನೆಯಲ್ಲಿ ಬಿಕ್ಕಲಿರುತ್ತಾರೆ. ಬಹಳ ಬಡವರು ಗುಡಿಸಲುಗಳಲ್ಲಿ ಇರುತ್ತಾರೆ. ಅರಸಿನ ಮನೆಗೆ ಅರಮನೆ ಎಂದು ಹೆಸರು. ಮನೆಗೆ ಒಂದು ಮೊದಲು ಅನೇಕ ಕೊಠಡಿಗಳುಂಟು. ಅವು ಆಯಾ ಮನೆಗೆ ತಕ್ಕಹಾಗೆ ಇರುತ್ತವೆ. ಕಲ್ಲು ಮಣ್ಣು ಇಟ್ಟಿಗೆ ಸುಣ್ಣ ಹೆಂಚು ಮರ ಕಬ್ಬಿಣ ಮುಂತಾದ್ದರಿಂದ ಜನರು ಮನೆ ಕಟ್ಟುತ್ತಾರೆ. ಇಟ್ಟಿಗೆಗಳನ್ನೂ ಹೆಂಚುಗಳನ್ನೂ ಜೇಡಿಮಣ್ಣಿನಲ್ಲಿ ಮಾಡುತ್ತಾರೆ. ಸುಣ್ಣವನ್ನೂ ಮರಳನ್ನೂ ಸೇರಿಸಿ ಅರದು ಗಾರೆ ಮಾಡುತ್ತಾರೆ. ಮರಗಳು ಕಾಡಿನಲ್ಲಿ ಬೆಳೆಯುತ್ತವೆ.

---

## ೪೭ನೇ ಪಾಠ.

### ಹಸಿವು.

ಹಸಿವು ಅಡಗುವದಕ್ಕೆ ಆಹಾರವನ್ನು ಮಾಡೋಣಾಗುತ್ತದೆ. ಬಾಯಾರಿಕೆ ತೀರಲಿಕ್ಕೆ ನೀರು ಕುಡಿಯೋ



ಣಾಗುತ್ತದೆ. ಯಾರೂ ಬೆತ್ತಲೆ ಇರಬಾರದಾದಕಾರಣ ಗಂಡಸರು ಧೋತ್ರ, ಅಂಗವಸ್ತ್ರ, ಪಂಚೆ ಅಂಗಿ ರುಮಾಲು ಪೇಟಗು ಇಜಾರ ಮುಂತಾದ ದಿನಸಾವರಿ ಬಟ್ಟೆಗಳನ್ನ ಧರಿಸುತ್ತಾರೆ. ಹೆಂಗಸರು ಸೀರೆ ಕುಪ್ಪಸ ಕಶೇಪಾವಡೆ ಮೊದಲಾದ ಬಟ್ಟೆಗಳನ್ನ ಉಡುತ್ತಾರೆ. ಮಳೆಗಾಲದಲ್ಲೂ ಚಳಿಗಾಲದಲ್ಲೂ ಸಕಲಾತಿ ಕಂಬಳಿ ದುಪ್ಪಟಿ ಮುಂತಾದ್ದನ್ನ ಹೊದ್ದುಕೊಳ್ಳುತ್ತಾರೆ. ಬೇಸಿಗೆಯಲ್ಲಿ ನವುರು ಬಟ್ಟೆಗಳನ್ನ ಉಪಯೋಗ ಪಡಿಸಿಕೊಳ್ಳುತ್ತಾರೆ.

---

## ೪೮ನೇ ಪಾಠ.

### ಬೀದಿ.

ಬೀದಿಯು ಮನುಷ್ಯರು ನಡಿಯುವದಕ್ಕೂ ಬಂಡಿ ಹೋಗುವದಕ್ಕೂ ಮಾಡಿದಂಥಾ ಹಾದಿ. ಬೀದಿಯ ಎರಡು ಕಡೆಗಳಲ್ಲೂ ಮನೆಗಳು ಸಾಲಾಗಿ ಇರುತ್ತವೆ. ಮನೆ ಸ್ವಂತ ಸ್ವತ್ತು, ಬೀದಿ ಮದ್ದಿಕದ ಸ್ವತ್ತು, ಬೀದಿ ರೋತೆ ಇಲ್ಲದೆ ಇರಬೇಕು. ರೋತೆಯಾದರೆ ಗಬ್ಬು ಹೊಡದು ಅದರಿಂದ ಜನಗಳಿಗೆ ರೋಗ ಬರುತ್ತದೆ. ಬೂದಿ ಎಂಜಲೆಲೆ ಮುಂತಾದ ಕಸವನ್ನ ಬೀದೀಲಿ ಹಾಕಬಾರದು. ಬಚ್ಚಲ ನೀರನ್ನ ಬೀದಿಗೆ ಬಿಡಬಾರದು. ಬೀದಿಯನ್ನ ಗುಡಿಸಿ ಚೊಕ್ಕಟ ಮಾಡಬೇಕು. ಹೀಗೆ ಮಾಡಿದರೆ ಜನಗಳಿಗೆ ಬಳ್ಳೇದು.

---

Digitized by ROJA MUTHIAH RESEARCH LIBRARY

### ೪೯ನೇ ಪಾಠ.

### ಅಂಗಡಿ.

ಧಾನ್ಯದ ಅಂಗಡಿ, ಗಂದಿಗೆ ಅಂಗಡಿ, ಜವಳೀ ಅಂಗಡಿ, ಹಣ್ಣಿನ ಅಂಗಡಿ, ಮಿಠಾಯಿ ಅಂಗಡಿ, ಹೂವಿನ ಅಂಗಡಿ, ಕಾಯಿಪಲ್ಯದ ಅಂಗಡಿ, ಮುಂತಾದ ಅಂಗಡಿಗಳು ಉಂಟು. ಧಾನ್ಯದ ಅಂಗಡೀಲಿ ಅಕ್ಕಿ, ರಾಗಿ, ತೊಗರಿ, ಅವರೆ, ಹೆಸರು, ಉದ್ದು, ಕಡ್ಲೆ, ಹುರಳಿ, ಜೋಳ, ಗೋಧಿ, ಹುಣಸೇಹಣ್ಣು, ಮೆಣಸಿನಕಾಯಿ, ಮೆಣಸು, ತುಪ್ಪ, ಬೆಲ್ಲ, ಉಪ್ಪು ಮೊದಲಾದ ಜಿನಸುಗಳು ಮಾರುತ್ತಾರೆ. ಗಂದಿಗೇ ಅಂಗಡೀಲಿ ಶುಂಠಿ, ಲವಂಗ, ಜಾಕಾಯಿ, ಜಾಪತ್ರಿ ಮುಂತಾದ ಸರಕುಗಳು ಸಿಕ್ಕುತ್ತವೆ. ಜವಳೀ ಅಂಗಡಿಯಲ್ಲಿ ದಿನಸಾವರೀ ಬಟ್ಟೆಗಳೂ, ಹಣ್ಣಿನ ಅಂಗಡಿಯಲ್ಲಿ ನಾನಾ ಹಣ್ಣುಗಳೂ, ಮಿಠಾಯಿ ಅಂಗಡಿಯಲ್ಲಿ ಲಡ್ಡು, ಜಿಲೇಬಿ, ಖಿತ್ತಾಸು ಮುಂತಾದ ಭಕ್ಷ್ಯಗಳೂ, ಪಲ್ಯದ ಅಂಗಡಿಯಲ್ಲಿ ಬದನೇಕಾಯಿ, ಬೆಂಡೇಕಾಯಿ, ಸವತೇಕಾಯಿ, ಬಾಳೇಕಾಯಿ, ಕುಂಬಳಕಾಯಿ, ದಂಟು ಮುಂತಾದ ಕಾಯಿ ಸೊಪ್ಪುಗಳೂ ಮಾರುತ್ತವೆ.

---

### ೫೦ನೇ ಪಾಠ.

### ಮಠ.

ಹುಡುಗರು ಮಠಕ್ಕೆ ಹೋಗಿ ಓದು ಬರಹ ಕಲಿಯಬೇಕು. ಓದಲಿಕ್ಕೆ ಉಪಯೋಗವಾದ ಅನೇಕ ಒಳ್ಳೇ ಪುಸ್ತಕಗಳು ಉಂಟು. ಅವುಗಳನ್ನ ಉಪಾಧ್ಯರು ಹೇಳಿ



ಕೊಡುತ್ತಾರೆ. ಅವರು ಹೇಳಿದ ಪ್ರಕಾರ ಹುಡುಗರು ಪಾಠಗಳನ್ನ ಶ್ರದ್ಧೆಯಿಂದ ಕಲಿತುಕೊಳ್ಳಬೇಕು. ಎಷ್ಟು ಶ್ರದ್ಧೆಯಾಗಿದ್ದರೆ ಅಷ್ಟು ಬೇಗ ವಿದ್ಯೆ ಬರುವದು. ಕಲಿತದ್ದನ್ನ ಮರಿಯದೆ ನೆನಪು ಇಡಬೇಕು. ಪುಸ್ತಕಗಳನ್ನ ಮಾಸದೆ ಹರಿಯದೆ ಜೋಪಾನವಾಗಿ ಇಟ್ಟುಕೊಳ್ಳಬೇಕು. ಓದುವವರು ಉಪಾಧ್ಯಾಯರಲ್ಲಿ ಮರ್ಯಾದೆಯಾಗಿ ನಡಕೊಂಡು ಬೇಗ ವಿದ್ಯೆಕಲಿತರೆ ಅವರಿಗೆ ಬಹಳ ಮೇಲು ಉಂಟಾಗುವದು.

---

### ೫೧ನೇ ಪಾಠ.

### ತೋಟ.

ಸ್ನೇಹಿತನೇ ಈ ತೋಟ ಎಷ್ಟು ಹಸನಾಗಿ ಇದೆ ನೋಡು. ಬೇಲೀ ಬತ್ತಿನಲ್ಲಿ ಹೂ ಗಿಡಗಳು ಸೊಂಪಾಗಿ ಬೆಳದು ಹೂ ಹಿಡಿದು ಇರುತ್ತವೆ. ಅವುಗಳಿಗೆಲ್ಲಾ ತೋಟಗಾರನು ಪಾತಿಮಾಡಿ ಚನ್ನಾಗಿ ನೀರುಕಟ್ಟಿ ಇದ್ದಾನೆ. ಇಲ್ಲಿ ಮಾವು, ಹಲಸು, ತೆಂಗು, ಅಡಿಕೆ, ಮುಂತಾದ ಫಲ ವೃಕ್ಷಗಳು ತುಂಬಾ ಕಾಯಿ ಹಿಡಿದು ಇರುತ್ತವೆ. ಬಾಳೇ ಗಿಡಗಳು ಇನ್ನೂ ಚಿಕ್ಕವು. ಒಂದಾದರೂ ಗೊನೆ ಬಿಡಲಿಲ್ಲ. ಆ ದ್ರಾಕ್ಷೆಯ ಬಳ್ಳಿ ಹೊರವಾಗಿ ಬೆಳೆದು ಹಬ್ಬಿ ಗೊಂಚಲು ಗೊಂಚಲಾಗಿ ಗೊನೆಗಳು ಬಿಟ್ಟು ಇದೆ. ಊರುಬಾಗಲಿನ ಕೆರೆಯಿಂದ ಈ ತೋಟಕ್ಕೆ ನೀರು ಹಾಯುತ್ತದೆ. ಈ ತೋಟ ನೋಡಲಿಕ್ಕೆ ಬಹಳ ಅಲಂಕಾರವಾಗಿ ಇದೆ.

---

Digitized by ROJA MUTHIAH RESEARCH LIBRARY

## ೨೨ನೇ ಪಾಠ.

### ಜೀವಜಂತುಗಳ ಮೇಲೆ ಇಡಬೇಕಾದ ದಯೆ.

ನಾವು ಸಮಸ್ತ ಪ್ರಾಣಿಗಳ ವಿಷಯದಲ್ಲೂ ಬಹಳ ಕರುಣೆಯುಳ್ಳವರಾಗಿ ಇರಬೇಕು. ಮುಖ್ಯವಾಗಿ ನಮ್ಮನ್ನ ಉಪದ್ರ ಪಡಿಸದೆ ಇರುವ ನೊಣ, ಸೊಳ್ಳೆ, ಜೇಡ, ಹಲ್ಲಿ ಮುಂತಾದ ಯಾವ ಜೀವ ಜಂತುಗಳನ್ನೂ ನಾವು ಹಿಂಸಿಸ ಬಾರದು. ನಾವು ಮುಟ್ಟದೇ ಇದ್ದರೆ ನಮ್ಮನ್ನ ಕುಟಕದಂಥಾ ಜೇನು ನೊಣ ಮೊದಲಾದ ಯಾವ ಹುಳವನ್ನೂ ನಾವು ನೋಯಿಸಬಾರದು. ಶ್ವಾಸವುಳ್ಳ ಸಮಸ್ತ ಜಂತುಗಳಿಗೂ ನಮ್ಮಹಾಗೆ ಸುಖ ದುಃಖ ಜ್ಞಾನ ಉಂಟು. ಆದಕಾರಣ ನಾವು ಅಂಥಾ ಜಂತುಗಳನ್ನ ಎಷ್ಟು ಮಾತ್ರವೂ ಹಿಂಸಿಸದೆ ಅವುಗಳ ವಿಷಯದಲ್ಲಿ ದಯೆ ವುಳ್ಳವರಾಗಿ ಇರಬೇಕು.

---



## ೨೩ನೇ ಪಾಠ.



ಹಸು.

ಹಸು ಬಹಳ ಉಪಯೋಗವಾದದ್ದು. ಅದರ ಬಣ್ಣ ನಾನಾವಿಧ, ಅದು ಬಹಳ ಸಾಧು, ಅದರ ಮುಖದಿಂದಲೇ ಅದರ ಸಾಧುತನ ತಿಳಿಯುತ್ತದೆ. ಅದಕ್ಕೆ ಕಾಲು ನಾಲ್ಕು, ಮೊಲೆ ನಾಲ್ಕು, ಎರಡು ಕೊಂಬು, ಒಂದು ಬಾಲ, ಅದರ ಮೈ ಮೇಲಿನ ಕೂದಲು ಬಹಳ ಚಿಕ್ಕದು, ಕಾಲಿನ ಗೊರಸಲು ಎರಡಾಗಿ ಸೀಳಿದ ಹಾಗೆ ಇದೆ. ಅದು ಯಾರನ್ನೂ ವುಪದ್ರ ಪಡಿಸುವದಿಲ್ಲ. ಅದು ಸಾಧಾರಣವಾಗಿ ವರ್ಷಕ್ಕೆ ಒಂದು ಸಲ ಕರು ಈಯುತ್ತದೆ. ಹೆಣ್ಣುಕರಕ್ಕೆ ಹೆಂಗರು, ಗಂಡು ಕರಕ್ಕೆ ಹೋರಿಕರು ಎಂತ ಹೆಸರು. ಅದು ಹುಲ್ಲು ಮೇಯುತ್ತದೆ. ನಿದಾನವಾಗಿ ಮೆಲಕು ಹಾಕುತ್ತದೆ. ದಾಹವಾದರೆ ನೀರು ಕುಡಿಯುತ್ತದೆ. ಅದು ದಿನಾ ಎರಡು ಹೊತ್ತು ಹಾಲು ಕರಿಯುತ್ತದೆ. ಹಾಲಿನಲ್ಲಿ ಮೊಸರು, ಬೆಣ್ಣೆ, ತುಪ್ಪ ಇವುಗಳು ವುಂಟಾಗುತ್ತವೆ. ಅದಕ್ಕೆ ಒಳ್ಳೇ ಮೇವು ಹಾಕಿ ಅದನ್ನ ಆರೈಕೆಯಾಗಿ ಕಾಪಾಡಬೇಕು.

---

Digitized by ROJA MUTHIAH RESEARCH LIBRARY

## ೧೪ನೇ ಪಾಠ.



ಎತ್ತು.

ಎತ್ತು ಬಹಳ ವುಪಯೋಗವಾದದ್ದು. ಜನರು ಎತ್ತುಗಳಿಂದ ಗದ್ದೆಗಳನ್ನೂ ಹೊಲಗಳನ್ನೂ ಉಳಿಸಿ ಆ ಮೇಲೆ ಬಿತ್ತುತ್ತಾರೆ. ಅವು ಕಪಿಲೆಗಳನ್ನ ಕಳೆಯುತ್ತವೆ. ಎತ್ತುಗಳು ಭರ್ತೀ ಬಂಡಿಗಳನ್ನ ಎಳೆಯುವದಕ್ಕೂ, ಊರಿಂದ ಊರಿಗೆ ಸವಾರೀ ಬಂಡಿ ಗಾಡಿ ಮುಂತಾದವುಗಳನ್ನ ಎಳೆಯುವದಕ್ಕೂ, ಗಾಣ ಎಳಯುವದಕ್ಕೂ ಸಹ ಒದಗುತ್ತವೆ. ಕೆಲವು ಜನರು ಕುದುರೆಯ ಮೇಲೆ ಹ್ಯಾಗೋ ಹಾಗೆ ಎತ್ತಿನ ಮೇಲೆ ಸಹ ಸವಾರೀ ಮಾಡುತ್ತಾರೆ.

———



## ೧೫ನೇ ಪಾಠ.



ಕುದುರೆ.

ಕುದುರೆ ರೂಪದಲ್ಲಿ ಬಹಳ ಚಲುವಾದದ್ದು. ಅದರ ಮೈ ಬಹಳ ಸೊಗಸಾಗಿಯೂ ಬಲವಾಗಿಯೂ ಇದೆ. ಅದು ಬಹಳ ಗಂಭೀರವಾದದ್ದು. ಅದರ ಕಣ್ಣುಗಳು ದೊಡ್ಡದಾಗಿ ಹೊಳೆಯುತ್ತವೆ. ಕಿವಿಗಳು ಸರಿಯಾಗಿ ಒಂದೇ ಪ್ರಕಾರವಾಗಿ ಇವೆ. ಬಹಳ ಅಗಲವೂ ಅಲ್ಲ, ಉದ್ದವೂ ಅಲ್ಲ. ಅದರ ಕುತ್ತಿಗೆಯ ಮೇಲಿನ ಕೂದಲು ಬಹಳ ಅಲಂಕಾರವಾಗಿ ಇದೆ. ಕುದುರೆಗಳು ಬಿಳುಪು, ಕಪ್ಪು, ಬೂದು ಮುಂತಾದ ನಾನಾವರ್ಣಗಳಾಗಿ ಇರುತ್ತವೆ. ಬಾಲದಲ್ಲಿ ತುಂಬಾ ಕೂದಲು ಇರುತ್ತದೆ. ಕುದುರೆ ಚುರುಕಾದದ್ದು; ಧೈರ್ಯ ಉಳ್ಳದ್ದು. ದಣಿವು ಸಹಿಸಲಾಪದು. ಇದಕ್ಕೆ ಒಳ್ಳೇ ಜ್ಞಾಪಕ ಶಕ್ತಿ ಉಂಟು. ಇದು ಯಾರಿಗೂ ಉಪದ್ರವ ಮಾಡುವದಿಲ್ಲ. ಇದರ ಆಹಾರ ಹುಲ್ಲು. ಹೆಣ್ಣುಕುದುರೆ ವರುಷಕ್ಕೆ ಒಂದು ಮರೀ ಹಾಕುತ್ತದೆ. ಕುದುರೆಗಳು ಸವಾರಿಗೆ ಒದಗುತ್ತವೆ. ಬಂಡಿ ಮುಂತಾದ್ದನ್ನ ಎಳೆಯುತ್ತವೆ.

———

Digitized by ROJA MUTHIAH RESEARCH LIBRARY

## ೧೬ನೇ ಪಾಠ.



ಕತ್ತೆ.

ಕುದುರೆಗಿಂತ ಕತ್ತೆ ಆಕಾರದಲ್ಲಿ ಚಿಕ್ಕದು, ವೇಗದಲ್ಲಿ ಮಟ್ಟು, ಚಟುವಟಿಕೆಯಲ್ಲಿ ಕಮ್ಮಿ, ಬುದ್ಧಿಯಲ್ಲಿ ಕಡಿಮೆ. ಇದು ಅತಿಸಾಧು, ಬಹಳ ಮೊದ್ದು. ಇದಕ್ಕೆ ಮೇವು ಸಹ ಹಾಕದೆ ಇದನ್ನ ಜನಗಳು ಹಿಂಸಿಸಿ ಕಷ್ಟಪಡಿಸಿ ದಣಿಸುವದರಿಂದ ಇದು ಮತ್ತಷ್ಟು ಮೊದ್ದಾಗಿ ಇದೆ. ಇದು ಹುಲ್ಲು, ಕಡ್ಡಿ, ಮುಳ್ಳು, ಸೊಪ್ಪು ಮುಂತಾದ್ದನ್ನ ಮೇಯುತ್ತದೆ. ಹೆಣ್ಣುಕತ್ತೆ ವರ್ಷಕ್ಕೆ ಒಂದು ಮರಿ ಹಾಕುತ್ತದೆ. ಕತ್ತೆಗಳ ಮೇಲೆ ಅಗಸರು ಮೂಟೆಗಳನ್ನ ಹೊರಿಸುತ್ತಾರೆ, ಅವುಗಳ ಮೇಲೆ ಲಂಬಾಡಿಗರು ಹೇರುಗಳನ್ನೂ ಕವಾಡಗಳನ್ನೂ ಹೇರಿಕೊಂಡು ಹೋಗಿ ಪಟ್ಟಣಗಳಲ್ಲಿ ಮಾರುತ್ತಾರೆ, ಹೀಗೆ ಹೊರೆಗಳನ್ನ ಹೊರಲಿಕ್ಕೆ ಅವು ಉಪಯೋಗವಾಗಿ ಇರುತ್ತವೆ.

———



## ೧೭ನೇ ಪಾಠ



ಬೆಕ್ಕು.

ಬೆಕ್ಕು ರೂಪದಲ್ಲಿ ಚಲುವಾಗಿ ನಾನಾ ಬಣ್ಣವಾಗಿ ಇದೆ. ಅದರ ತಲೆ ದುಂಡಗೆ ಇದೆ, ಕಿವಿಗಳು ಚಿಕ್ಕವು, ಬಾಲ ಪುಷ್ಟದ್ದು, ಅದರ ಮೈಮೇಲಿನ ಕೂದಲು ಮೃದು, ಕಾಲು ನಾಲ್ಕು, ಕಾಲೊಂದಕ್ಕೆ ಐದು ಬೆಟ್ಟುಗಳೂ ಐದು ಉಗುರುಗಳೂ ಉಂಟು. ಬೆಕ್ಕು ಉಗುರುಗಳನ್ನ ಮುಂದಕ್ಕೆ ಚಾಚುತ್ತದೆ, ಹಿಂದಕ್ಕೂ ಎಳಕೊಳ್ಳುತ್ತದೆ. ಬೆಕ್ಕಿಗೆ ಮೀಸೆ ಉಂಟು. ಅದರ ಕಣ್ಣುಗಳು ಗೋಮೇಧಿಕದ ಹಾಗೆ ರಾತ್ರೀಲಿ ಹೊಳೆಯುತ್ತವೆ. ಅದಕ್ಕೆ ಹಗಲು ಇರಳು ಎರಡು ಹೊತ್ತು ಕಣ್ಣುಗಳು ಕಾಣಿಸುತ್ತವೆ. ಬೆಕ್ಕು ಕಪಟಗುಣ ಉಳ್ಳದ್ದು. ಅವು ಇಲಿ ಗುಬ್ಬಿ ಗಿಣಿ ಮುಂತಾದವುಗಳನ್ನ ಹೊಂಚುಹಾಕಿ ಹಿಡಿದು ತಿನ್ನುತ್ತವೆ. ಹಾಲು ಅನ್ನ ಮಾಂಸ ಹುಳ ಮುಂತಾದವುಗಳನ್ನ ಸಹ ತಿನ್ನುತ್ತವೆ. ಬೆಕ್ಕುಗಳು ಕಾದುತ್ತವೆ. ಹೆಣ್ಣು ಬೆಕ್ಕು ಸಂವತ್ಸರಕ್ಕೆ ಮೂರು ಸಲ ಮರಿ ಹಾಕುತ್ತದೆ. ಸಲ ಒಂದಕ್ಕೆ ನಾಲ್ಕು ಮರಿ ಮೊದಲು ಆರು ಮರಿಗಳ ತನಕ



Digitized by ROJA MUTHIAH RESEARCH LIBRARY

ಹಾಕುತ್ತದೆ. ಇಲಿಗಳ ಕಾಟವು ಅಡಗಿಸುವದಕ್ಕೋಸ್ಕರ ಜನರು ಮನೆಯಲ್ಲಿ ಬೆಕ್ಕುಗಳನ್ನ ಸಾಕುತ್ತಾರೆ.

---

## ೨೮ನೇ ಪಾಠ.



ನಾಯಿ.

ನಾಯಿ ರೂಪದಲ್ಲಿ ಚಲುವಾದದ್ದು. ಇದರ ದೃಷ್ಟಿ ಚುರುಕು, ಮೈ ಬಲವಾಗಿಯೂ ನಡಿಯಲಿಕ್ಕೂ ಓಡಲಿಕ್ಕೂ ಬಹಳ ಸಲಕರಣೆಯಾಗಿಯೂ ಇಧೆ. ಕೆಲವು ನಾಯಿಗಳ ಮೈ ಮೇಲಿನ ಕೂದಲು ನುಣ್ಣಗೆ ಚಿಕ್ಕದಾಗಿ ಇಧೆ. ಕೆಲವು ನಾಯಿಗಳಿಗೆ ಬಾಲದಲ್ಲಿ ತುಂಬಾ ಕೂದಲು ಉಂಟು. ನಾಯಿಗಳು ಅನೇಕ ತರಹವಾದ್ದಾಗಿಯೂ ನಾನಾ ವರ್ಣ ಉಳ್ಳದ್ದಾಗಿಯೂ ಇರುತ್ತವೆ. ಚುರುಕು ಚಡವಣಿಕೆ ಸೂಕ್ಷ್ಮಬುದ್ಧಿ ವಿಶ್ವಾಸ ಇವುಗಳೆಲ್ಲಾ ನಾಯಿಗಳಿಗೆ ಉಂಟು. ಅದಕ್ಕೆ ಜ್ಞಾಪಕ ಶಕ್ತಿ ಬಹಳ. ಅದು ಮಾಂಸ ರೊಟ್ಟಿ ಅನ್ನ ಮುಂತಾದ್ದನ್ನ ತಿನ್ನುತ್ತದೆ. ಅದು ನಿದ್ರೆ ಹೋಗುವಾಗ ಸ್ವಲ್ಪ ಸದ್ದಾದರೆ ಅದಕ್ಕೆ ಎಚ್ಚರವಾಗುತ್ತದೆ. ಹೆಣ್ಣು ನಾಯಿ ಸಂವತ್ಸರಕ್ಕೆ ಎರಡು ಸಲ ಮರಿ ಹಾಕುತ್ತದೆ. ಸಲ ಒಂದಕ್ಕೆ ನಾಲ್ಕು ಮೊದಲು ಎಂಟು ಮರಿಗಳ ತನಕ ಹಾಕುತ್ತದೆ. ಸಾಕಿದ ನಾಯಿ ತನ್ನ ಧಣಿಯ ಮನೆಯನ್ನೂ ಸೊತ್ತನ್ನೂ ಕಾಯುತ್ತದೆ.

---



## ೨೯ನೇ ಪಾಠ.



ಒಂಟೆ.

ಒಂಟೆ ದೊಡ್ಡ ಮೃಗ. ಅದರ ತಲೆ ಚಿಕ್ಕದು, ಕುತ್ತಿಗೆ ಬಹಳ ಉದ್ದವಾಗಿ ಸಣ್ಣಗೆ ಡೊಂಕಾಗಿ ಇಧೆ. ಅದರ ಮೈ ಮೇಲಿನ ಕೂದಲು ಬೂದುವರ್ಣ, ವರ್ಷಕ್ಕೆ ಎರಡು ಸಲ ಉದುರುತ್ತದೆ. ಅದರ ಬಾಲ ಮೋಟು, ಅದರ ರೂಪ ವಿಕಾರವಾದದ್ದು. ಒಂಟೆಗೆ ಸ್ವಲ್ಪ ಬುದ್ಧಿಯೂ ಬಹಳ ಸಹನೆವೂ ಉಂಟು. ಎಷ್ಟು ಕಷ್ಟ ಬಂದಾಗ್ಯೂ ಅದು ಸಲೀಸಾಗಿ ಸಹಿಸುತ್ತದೆ. ಒಂಟೆಗಳು ಭಾರವಾದ ಹೊರೆಗಳನ್ನ ಹೊತ್ತುಕೊಂಡು ದೂರ ಪ್ರಯಾಣ ನಡೆಯುತ್ತವೆ. ಅವು ಸಾಧುವಾದದ್ದು, ತಮ್ಮ ಆಹಾರವನ್ನ ಬೇರೇ ಮೃಗ ತಿಂದಾಗ್ಯೂ ಅವುಗಳ ಗೋಜಿಗೆ ಹೋಗುವದಿಲ್ಲ. ಅವು ಬಹಳ ಕಷ್ಟ ಕೆಲಸಗಳನ್ನ ಮಾಡುತ್ತವೆ. ಅವು ಸೊಪ್ಪುಗಳನ್ನೂ ಮುಳ್ಳು ಗಿಡಗಳನ್ನೂ ತಿನ್ನುತ್ತವೆ. ಹೆಣ್ಣು ಒಂಟೆ ಸಂವತ್ಸರಕ್ಕೆ ಒಂದು ಮರಿ ಹಾಕುತ್ತದೆ. ಮನುಷ್ಯರಿಗೆ ಒಂಟೆಗಳು ಬಹಳ ಉಪಯೋಗ. ಅರಬ್ಬೀಜನರಿಗೆ ಅವುಗಳಿಂದ ಆಗುವ ಸಹಾಯ ಇಷ್ಟೆಂದು ಹೇಳತೀರದು.

---

Digitized by ROJA MUTHIAH RESEARCH LIBRARY

## ೬೦ನೇ ಪಾಠ.




### ಆನೆ.

ಮೃಗಗಳ ಒಳಗೆ ಆನೆ ಬಹಳ ದೊಡ್ಡದು. ಅದರ ತಲೆ ದಪ್ಪ, ಕಣ್ಣುಗಳು ಅತಿ ಚಿಕ್ಕವು, ಕಿವಿಗಳು ಬಹು ದೊಡ್ಡವು, ಬೆನ್ನು ಸ್ವಲ್ಪ ಬಾಗಿ ಇರುತ್ತದೆ. ಎರಡು ಕೊಂಬುಗಳ ನಡುವೆ ಸೊಂಡಿಲು ಇರುತ್ತದೆ. ಕೋರೆಗಳು ಎರಡು, ಇವುಗಳಿಗೆ ಕೊಂಬು ಯೆಂತಲೂ ದಂತವೆಂತಲೂ ಹೆಸರು. ಆದರ ಬಣ್ಣ ಕರೀದು ಅದಕ್ಕೆ ಬಹಳ ಬಲವೂ ಬುದ್ಧಿಯೂ ಉಂಟು. ಅದಕ್ಕೆ ಬಹು ಜ್ಞಾಪಕ ಶಕ್ತಿ. ಅದು ತನಗೆ ಮಾಡಿದ ಹಿತಾಹಿತಗಳನ್ನು ಮರೆಯುವದಿಲ್ಲ. ಅವು ಅಡವಿಯಲ್ಲಿ ಹಿಂಡು ಹಿಂಡಾಗಿ ಶೇರಿ ಸಂಚರಿಸುತ್ತವೆ. ಹಿಂಡಿಗೆ ಒಂದು ಸಲಗ ಉಂಟು. ಆನೆಗಳು ಹುಲ್ಲು ಜೊಂಡು ಸೊಪ್ಪು ಬೇರು ಕಬ್ಬು ಮುಂತಾದವುಗಳನ್ನು ತಿನ್ನುತ್ತವೆ. ಹೆಣ್ಣು ಆನೆ ಎರಡು ಮೂರು ಸಂವತ್ಸರಕ್ಕೆ ಒಂದು ಮರಿ ಹಾಕುತ್ತದೆ. ಹೆಣ್ಣಾನೆಗೆ ಕೊಂಬು ಅಪರೂಪ. ಆನೆ ಮಾವಟಿಗ ಹೇಳಿದ ಹಾಗೆ ಕೇಳುತ್ತದೆ. ಅದು ಬಹಳ ಭಾರವಾದ ಹೊರೆಗಳನ್ನು ಹೊರುತ್ತದೆ. ಜನರು ಅವುಗಳ ಮೇಲೆ ಅಂಬಾರಿ ಹಾಕಿ ಅದರಲ್ಲಿ ಕೂತು ಸವಾರಿ ಮಾಡುತ್ತಾರೆ. ಅವು ಜನರಿಗೆ ಇನ್ನೂ ಅನೇಕ ಕಷ್ಟಕೆಲಸಗಳಿಗೆ ಒದಗುತ್ತವೆ.

---



## ೬೧ನೇ ಪಾಠ.




### ಹೊಗೇಯಂತ್ರದ ಚಿತ್ರ.

ರೇಲ್ವೆ ಅಂದರೆ ಕಬ್ಬಿಣಭಾಟೆ. ಇದು ಸಮವಾದ ಹಾದಿಯಲ್ಲಿ ದಿಮ್ಮಿಗಳು ಹಾಸಿ ಅದರ ಮೇಲೆ ಕಬ್ಬಿಣದ ಸಲಾಕಿಗಳು ಇರಿಸಿ ಬಿಗಿದು ಮಾಡೋಣಾಗಿ ಇರುತ್ತದೆ. ಈ ಸಲಾಕಿಗಳ ಮೇಲೆ ಹೊಗೇಯಂತ್ರ ಸಾಕಾದ ನೀರಿನ ಹಬೆಯ ಬಲದಿಂದ ಅನೇಕ ಬಂಡಿಗಳ ಸಾಲುಗಳನ್ನು ಎಳಕೊಂಡು ಓಡುತ್ತದೆ. ಇದರ ಓಟ ಬಹುವೇಗ, ಕುದುರೆಯ ನಾಗಾಲು ಓಟಕ್ಕಿಂತ ಹೆಚ್ಚಾದಂಥಾದ್ದು. ಇದು ಒಂದು ಘಂಟೇ ಹೊತ್ತಿಗೆ ೩೦ ಅಥವಾ ೪೦ ಘಳಿಗೇ ದೂರ ಹೋಗುತ್ತದೆ. ಇದರ ಹಿಂದೆ ತಗಲಿಸುವ ಸವಾರಿ ಬಂಡಿಗಳಲ್ಲಿ ಪಯಿಣ ಹೋದರೆ ವೆಚ್ಚ ಕೂಡಿಬರುತ್ತದೆ, ಬಹು ಸಲಕರಣೆಯೂ ಸಂತೋಷವೂ ಸಹ ಉಂಟು. ಆದ್ದರಿಂದ ಈ ಭಾಟೆ ಎಲ್ಲೆಲ್ಲಿ ಆಗುತ್ತದೋ ಅಲ್ಲೆಲ್ಲ ಜನರೂ ಸಾಮಾನುಗಳೂ ಇದರಲ್ಲಿ ಹೊರ್ತು ಬೇರೇ ಯಾತರಲ್ಲೂ ಹೋಗುವದಿಲ್ಲ.

Digitized by ROJA MUTHIAH RESEARCH LIBRARY

## ೭೦ನೇ ಪಾಠ.



ಇದು ಹೊಗೇಯಂತ್ರದ ಹಿಂದೆ ತಗಲಿಸುವ ಸವಾರಿಗಾಡಿಗಳ ಚಿತ್ರ. ಈ ಗಾಡಿಯಲ್ಲಿ ಅನೇಕ ಜನಗಳು ಕೂತುಕೊಳ್ಳುತ್ತಾರೆ. ಕೆಲವರು ತಮ್ಮ ಒಂದು ಕೈಯಲ್ಲಿ ಎತ್ತತಕ್ಕಷ್ಟು ಸಾಮಾನು ಗಂಟುಗಳನ್ನು ಸಹ ತಮ್ಮ ಬಳಿಯಲ್ಲಿ ಇಟ್ಟುಕೊಳ್ಳುತ್ತಾರೆ. ಹೀಗೆ ಒಂದಕ್ಕೊಂದು ತಗಲಿಸಿದಂಥಾ ಬಂಡಿಗಳ ಸಾಲನ್ನು ಹೊಗೇಯಂತ್ರ ಬಹು ಬೇಗ ಎಳಕೊಂಡು ಹೋಗುತ್ತದೆ. ಸವಾರಿ ಹೋಗುವಾಗ ಬಂಡಿಯಲ್ಲಿ ಇರುವಂಥಾವರಿಗೆ ಮೈ ಕದಲದೆ ಬಹಳ ಸಂತೋಷವಾಗಿರುತ್ತದೆ. ಪ್ರಯಾಣಗಳ ಬಳಗೆ ಈ ಗಾಡಿಯಲ್ಲಿ ಮಾಡುವ ಪಯಣ ಯಲ್ಲರಿಗೂ ಬಹಳ ಅನುಕೂಲವಾದಂಥಾದ್ದು. ಇದರಲ್ಲಿ ಕಳವು ಮುಂತಾದ ಭಯವೇನೂ ಇಲ್ಲ. ಏನಾದರೂ ಅಪಾಯ ಬಂದೀತೆಂಬ ಅಂಜಿಕೆಯೂ ಇಲ್ಲ. ಇದರಲ್ಲಿ ಸ್ವಲ್ಪ ಹೊತ್ತಿನವೊಳಗೆ ಬಹಳ ದೂರ ಸಂಚರಿಸಬಹುದು. ಆದಕಾರಣ ಸವಾರಿ ಮಾಡುವಂಥಾವರು ಅಲ್ಲಲ್ಲಿ ಇಳಿದು ತಂಗಬೇಕಾದ ಅಗತ್ಯವೂ ಇಲ್ಲ, ಒಂದು ಸ್ಥಳದಿಂದ ಮತ್ತೊಂದಕ್ಕೆ ಅವರು ಒಂದೇ ಸಲ ಹೋಗಿ ಕ್ರಮವಾಗಿ ತಲಪಬಹುದು. ಇದರಿಂದ ಜನಗಳಿಗೆ ಉಂಟಾಗುವ ಸಲಕರಣೆ ಎಷ್ಟೆಂತ ಹೇಳಕೂಡದ್ದಾಗಿ ಇರುತ್ತದೆ.

---



## ೭೧ನೇ ಪಾಠ.



ಇದು ಕಬ್ಬಿಣ ಭಾಟೆಯಲ್ಲಿ ಹೋಗುವ ಭರ್ತೀ ಬಂಡಿಯ ಚಿತ್ರ. ಭರ್ತೀ ಬಂಡಿ ಅಂದರೆ ಸಾಮಾನುಗಳನ್ನೂ ಜಿನಸುಗಳನ್ನೂ ಹೇರುವಂಥಾ ಬಂಡಿ. ಒಂದೊಂದು ವೇಳೆ ಇಂಥಾ ಬಂಡಿಗಳನ್ನ ಸವಾರೀ ಬಂಡಿಗಳ ಸಾಲಿನ ಹಿಂದೆ ತಗಲಿಸೋಣಾಗುತ್ತದೆ. ಒಂದೊಂದು ವ್ಯಾಳೆ ಈ ಭರ್ತೀ ಬಂಡಿಗಳ ಸಾಲನ್ನ ಹೊಗೇಯಂತ್ರದ ಹಿಂದೆ ತಗಲಿಸೋಣಾಗಿರುತ್ತದೆ. ಹೊಗೇ ಯಂತ್ರಕ್ಕೆ ಸವಾರೀ ಗಾಡಿಗಳನ್ನ ಮಾತ್ರ ತಗಲಿಸಿ ಇದ್ದರೆ, ಅದಕ್ಕೆ ಸವಾರೀ ಗಾಡಿಯ ಸಾಲೆಂದು ಹೆಸರು. ಸಾಮಾನು ಬಂಡಿಗಳನ್ನ ಮಾತ್ರ ತಗಲಿಸಿ ಇದ್ದರೆ ಅದಕ್ಕೆ ಸಾಮಾನು ಬಂಡಿಯ ಸಾಲೆಂದು ಹೆಸರು, ಕಬ್ಬಿಣ ಭಾಟೆ ಏರ್ಪಟ್ಟದ್ದರಿಂದ ಮದ್ರಾಸಿನಿಂದ ಬೆಂಗಳೂರಿಗೆ ೫೦ ಶೇರು ಅಕ್ಕೀ ತರಲಿಕ್ಕೆ ೧ ಆಣೆಗಿಂತ ಹೆಚ್ಚು ವೆಚ್ಚ ಹಿಡಿಯುವದಿಲ್ಲ. ಆದಕಾರಣ ಅಗ್ಗವಾಗಿ ಇರುವ ಸ್ಥಳದಿಂದ ತಗ್ಗಾಗಿ ಇರುವ ಸ್ಥಳಕ್ಕೆ ಅಕ್ಕಿ ಮುಂತಾದ ಜಿನಸುಗಳನ್ನು ಬಹುಬೇಗ ತರೋಣಾಗುತ್ತದೆ.

---

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY